ಅಧ್ಯಕ್ಷರು.--ತಾವು 334ರ ಮೇರೆಗೆ ನೋಟೀಸ್ ಕಳುಹಿಸಿದ್ದೀರಿ; ವಿರೋಧಪಕ್ಷದ ನಾಯಕರೂ ಕಳುಹಿಸಿದ್ದಾರೆ : ಬಂಗಾರಪ್ಪನವರೂ ಕಳುಹಿಸಿದ್ದಾರೆ. ಇನ್ನೂ ಅನೇಕ ಸದಸ್ಯರು ಕಳುಹಿಸಿದ್ದಾರೆ. ಪಾವಗಡದ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಕೇಳಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್ :— 334ರ ಮೇರೆಗೆ ನೋಟಿಸ್ ಕೊಟ್ಟಿದ್ದೇವೆ.

ಹಕ್ಕು ಬಾಧ್ಯತ ಚ್ಯುತಿ ನಿರ್ಣಯ : ದಿನ ಪತ್ರಿಕೆಗಳಲ್ಲಿ ಜನತಾ ಸದಸ್ಯರ ಬಗ್ಗೆ ಬಂದಿರುವ ಪ್ರಕಟಣೆಯ ಮೇರೆಗೆ.

ಅಧ್ಯಕ್ಷರು.-- ಮಾನ್ಯ ಸದಸ್ಯರುಗಳು ಪ್ರಿವಿಲೇಜ್‌ಮೋಷನ್ ಕಳುಹಿಸಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.— ಮಾನ್ಯ ಮಂತ್ರಿಯವರು ಉತ್ತರ ಕೊಡುವುದಕ್ಕೆ ತಯಾರಾಗಿದ್ದಾರೆ.

Sri P. Ramdev : Sir privilege motion takes priority over all other matters.

Sri M.S. Krishnan : Sir....

Mr. Speaker : you are a senior member and you know that privilege matter takes precedence over all other matters. I have called the hon'ble member. Let us hear him.

Sri M.S. Krishnan : Agreed Sir.

ಶ್ರೀ ಪಿ. ರಾಂದೇವ್.—ಸ್ವಾಮಿ, ನಾವು 30 ಜನ ಶಾಸಕರು 190 ನಿಯಮದ ಪ್ರಕಾರ ಹಕ್ಕು ಚ್ಯುತಿ ಪ್ರಶ್ನೆಯನ್ನು ಕಳುಹಿಸಿದ್ದೇವೆ, ತಾವು ಅಪ್ಪಣೆ ಕೊಟ್ಟರೆ ಸಂಕ್ಷಿಪ್ತವಾಗಿ ಯಾವ ರೀತಿ ನಮ್ಮ ಹಕ್ಕಿಗೆ ಚ್ಯುತಿಯಾಗಿದೆ; ಅಡಚಣೆಯಾಗಿದೆ ಎನ್ನುತಕ್ಕ ಮಾತನ್ನು ಮನವರಿಕೆ ಮಾಡಿಕೊಡುವ ಬಗ್ಗೆ ನಾನು ನಿಂತಿದ್ದೇನೆ. ಅದಕ್ಕೆ ಸಂಬಂಧಪಟ್ಟ ದಸ್ತಾವೇಜುಗಳನ್ನು ನಾನು ಕಳುಹಿಸಿದ್ದೇನೆ. ನಿನ್ನೆ ದಿವಸ ಕನ್ನಡ ಪ್ರಭ ಪತ್ರಿಕೆ ಹಾಗೂ ಮುಂಜಾನೆ ಎರಡು ಪತ್ರಿಕೆಗಳಲ್ಲೂ ಬಂದಿದೆ : ಅದನ್ನು ತಮಗೆ ಕಳುಹಿಸಿದ್ದೇನೆ, ನಿರ್ದಿಷ್ಟವಾಗಿ ಹೇಗೆ ಹಕ್ಕುಚ್ಯುತಿಯಾಗಿದೆ ಎನ್ನುವುದರ ಬಗ್ಗೆ ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ :— ಹಕ್ಕುಚ್ಯುತಿ ಕೊಟ್ಟಿದ್ದಾರೆಂದು ತಾವು ಹೇಳಿದಿರಿ, ನಾನು ನೋಡಿಲ್ಲ ಅವರು ಪತ್ರಿಕೆಯ ಆಧಾರದ ಮೇಲೆ ಕೊಟ್ಟಿದ್ದಾರೆ, ಅಥವಾ ಸದಸ್ಯರ ಮೇಲೆ ಕೊಟ್ಟಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೊಟ್ಟಿರತಕ್ಕ ಹಕ್ಕುಚ್ಯುತಿ ವಿಷಯವನ್ನು ಓದುತ್ತೇನೆ.

ನಿಯಮ 191 ರಂತೆ ಈ ಕೆಳಗಿನ ವಿಷಯವನ್ನು ಹಕ್ಕುಚ್ಯುತಿ ವಿಷಯವಾಗಿ ಎತ್ತಲು ಸೂಚಿಸುತ್ತೇನೆ.

ಈ ದಿನದ ಪತ್ರಿಕೆಗಳಲ್ಲಿ ಎಂದರೆ, 25-8-83ರ ಪತ್ರಿಕೆಗಳಲ್ಲಿ ಪ್ರಮುಖವಾಗಿ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಜನತಾ ಶಾಸಕರು ವರ್ಗಾವರ್ಗಿಗಳಲ್ಲಿ ಭ್ರಷ್ಟಾಚಾರ ನಡೆಯಿಸುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೈತಿಕ ಬಲ ತಗ್ಗಿದೆ ತನಿಖೆಗೆ ಏರ್ಪಾಡು ಮಾಡಿ ವಿವರ ನೀಡಿ ಸಾಬೀತುಪಡಿಸುತ್ತೇನೆ ಎಂದು ಶ್ರೀ ಗೋವಿಂದ ಪಿ. ಒಡೆಯರಾಜರು ಆಪಾದಿಸಿದ್ದಾರೆ. ಮುಂಜಾನೆ ಪತ್ರಿಕೆಯಲ್ಲೂ ಸಹ ಬಂದಿದೆ. ಸದನದಲ್ಲಿ ನಿರ್ಭೀತಿಯಿಂದ ಕೆಲಸ ಮಾಡಲು ಅಡ್ಡಿಯುಂಟಾಗಿದೆ. ಪಕ್ಷದ ಶಾಸಕರ ಹಕ್ಕಿಗೆ ಚ್ಯುತಿಯುಂಟಾಗಿದೆ. ಆದ್ದರಿಂದ ನಾಳೆ ಎಂದರೆ 26–8–83ರಂದು ಈ ಹಕ್ಕು ಚ್ಯುತಿ ಎತ್ತಲು ಅವಕಾಶ ಕೊಡಬೇಕೆಂದು ಕೋರುತ್ತೇವೆ.

ಸಹಿ

ಪಿ. ರಾಂದೇವ್ ಮತ್ತು ಇತರರು.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಓದಿದ ಪ್ರಕಾರ ಇದರಲ್ಲಿ ಹಕ್ಕುಚ್ಯುತಿ ಬಗ್ಗೆ ಸ್ಪಷ್ಟವಾಗಿಲ್ಲ. ಕಾನೂನು ಪ್ರಕಾರ ನೋಟೀಸ್ ಕೊಡುವುದಕ್ಕೆ ಅಧಿಕಾರ ಇದೆ. ಅವರು ಏನು ವಿಚಾರ ತಂದಿದ್ದಾರೆ. The notice given by hon member in ambigous ಅವರ ಪತ್ರಿಕೆಯವರ ಮೇಲೆ ಆರೋಪ ಮಾಡಿದ್ದಾರೋ ; ಯಾರ ಮೇಲೆ ಮಾಡಿದ್ದಾರೋ ಎಂಬುದು ಸ್ಪಷ್ಟವಾಗಿಲ್ಲ. ನನ್ನ ಸೂಚನೆ ಪ್ರಕಾರ ಮಾನ್ಯ ಸದಸ್ಯರು ಕೊಟ್ಟಿರತಕ್ಕ ನೋಟೀಸು ಸ್ಪಷ್ಟವಾಗಿಲ್ಲದೇ ಇರುವುದರಿಂದ, ಪ್ರಿವಿಲೇಜ್ ಮೋಷನ್ ಎತ್ತುವುದರಿಂದ ಉದ್ದೇಶ ಸಾಧನೆ ಯಾಗುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು ಪ್ರತ್ಯೇಕವಾಗಿ ಪ್ರಿವಿಲೇಜ್ ನೋಟೀಸ್ ಕೊಡುವುದಕ್ಕೆ ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಂದೇವ್.—ಮಾನ್ಯ ಗೋವಿಂದ ಪಿ. ಒಡೆಯರಾಜ್‌ರವರು ಜನತಾ ಪಕ್ಷದ ಶಾಸಕರ ಮೇಲೆ ಭ್ರಷ್ಟಾಚಾರದ ಆಪಾದನೆ ಮಾಡಿರತಕ್ಕಂಥಾದ್ದು ಸ್ಪಷ್ಟವಾಗಿದೆ. ಪತ್ರಿಕೆಗಳಲ್ಲೂ ಬಂದಿದೆ; ಜನತಾಪಕ್ಷದ ಶಾಸಕರ ಮೇಲೆ ದೊಡ್ಡ ಆಪಾದನೆಯನ್ನು ಮಾಡಿರುವಾಗ; ಅದನ್ನು ರುಜುವಾತು ಪಡಿಸುತ್ತೇನೆ ಎನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ. ಸಿ. ಬಿ. ಐ. ತನಿಖೆ ಮಾಡಿಸಲಿ ವಿವರ ನೀಡಿ, ಸಾಬೀತು ಪಡಿಸುತ್ತೇನೆನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ. ನಿನ್ನೆ ಮಾತನಾಡುವಾಗ ಪುನಃ ಅದೇ ಮಾತನ್ನು ಹೇಳಿದ್ದಾರೆ. ಮಾನ್ಯ ದೇವೇಗೌಡರು ಪ್ರಶ್ನೆಯನ್ನು ಎತ್ತಿದಾಗ ನನ್ನ ಹತ್ತಿರ ಮೆಟೀರಿಯಲ್ಸ್ ಇದೆ; ಸಿ.ಬಿ.ಐ. ತನಿಖೆ ಮಾಡಿಸಲಿ. ಸಾಬೀತು ಪಡಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಜನತಾ ಪಕ್ಷದ ಶಾಸಕರು ಹಣ ಪಡೆದು ಲೋಕೋಪಯೋಗಿ ಇಲಾಖೆಯಲ್ಲಿ ವರ್ಗಾವಣೆ ಮಾಡಿದ್ದಾರೆಂದು ನೇರವಾಗಿ ಆಪಾದನೆ ಮಾಡಿದ್ದಾರೆ. ಇದು ಪತ್ರಿಕೆಯವರ ಮೇಲೆ ತಂದಿರತಕ್ಕ ಹಕ್ಕುಚ್ಯುತಿ ಅಲ್ಲ; ಈ ಮನೆಯ ವಿರೋಧ ಪಕ್ಷದ ಉಪನಾಯಕರ ಮೇಲೆ ತಂದಿರತಕ್ಕಂಥಾದ್ದು.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಯಾರಾದರೂ ಮಾತನಾಡುವಾಗ ಮಧ್ಯೆ ಕ್ರಾಸ್ ಮಾಡ ಬಾರದು. ದಯವಿಟ್ಟು ಎಲ್ಲಾ ಸದಸ್ಯರು ಇದನ್ನು ಪಾಲಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಕ್ರಾಸ್ ಮಾಡುವುದು ಅಂದರೆ, ಸ್ಪೀಕರ್ ಮತ್ತು ಮಾತ ನಾಡುವ ಸದಸ್ಯರ ಮಧ್ಯೆ ಕ್ರಾಸ್ ಮಾಡಬಾರದು ಎನ್ನುವುದು ಅವರಿಗೆ ಗೊತ್ತಿಲ್ಲ.

ಶ್ರೀ ಪಿ. ರಾಂದೇವ್ :—ಇದು ಬಹಳ ತೀವ್ರವಾದ ವಿಷಯ, ತಮಗೆ ಗೊತ್ತಿದೆ ಪ್ರಾಕ್ಟೀಸ್ ಅಂಡ್ ಪ್ರೊಸಿಜರ್ ಇನ್ ಪಾರ್ಲಿಮೆಂಟ್‌ನಲ್ಲಿ ಈ ಬಗ್ಗೆ ಹೇಳತಕ್ಕದ್ದು ಸಾಕಷ್ಟು ಉಲ್ಲೇಖವಿದೆ. ಪುಟ 175 ಏನು ಹೇಳಿದ್ದಾರೆಂದರೆ ಅದನ್ನು ಸ್ವಲ್ಪ ತಮಗೆ ಮುಂದೆ ಓದುತ್ತೇನೆ, ಇಲ್ಲಿ ಹಕ್ಕುಚ್ಯುತಿ ಯಾಗಿದೆ. ಶಾಸಕರು ನಿರ್ಭೀತಿಯಿಂದ ಯಾವುದೇ ಅಡೆತಡೆ ಆತಂಕ ಇಲ್ಲದೇ ಇರತಕ್ಕ ಮುಕ್ತ ವಾತಾ ವರಣದಲ್ಲಿ ಕೆಲಸ ಮಾಡಬೇಕು, ಶಾಸಕರ ಮೇಲೆ ತ್ರೀವವಾದ ಆಪಾದನೆಗಳು ಬಂದಾಗ ಅದನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನು ರುಜುವಾತು ಮಾಡಬೇಕು. ಇಲ್ಲದಿದ್ದರೆ ಮಾಡಿರತಕ್ಕ ಆಪಾದನೆಗಳನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕದ್ದು ಆಗಬೇಕು ಅವರು ಹಿಂದಕ್ಕೂ ತೆಗೆದುಕೊಂಡಿಲ್ಲ. ಪ್ರಿವಿಲೇಜ್ ಇಷ್ಟು ಅಂದರೆ ಏನು ಎಂದು ಪುಟ 177ರಲ್ಲಿ ಈ ರೀತಿ ಇದೆ :

> "In parliamentary language the term privilege applies to certain rights and immunities enjoyed by each House of Parliament and Committees of each House collectively, and by members of each House individually"

ವ್ಯಕ್ತಿಗತವಾಗಿ ಎಲ್ಲಾ ಸದಸ್ಯರಿಗೂ ಅಪ್ಲೈ ಆಗತಕ್ಕದ್ದು ಇದೆ. ಕಲೆಕ್ಟೀವ್ ಆಗಿ ಸದನಕ್ಕೂ ಅನ್ವಯಿಸುತ್ತದೆ. ಜೊತೆಗೆ ವೈಯಕ್ತಿಕವಾಗಿ ಪ್ರತಿಯೊಬ್ಬರಿಗೂ ಪ್ರಿವಿಲೇಜ್ ಅಡಕವಾಗಿದೆ ಎನ್ನುವು ದನ್ನು ಓದುತ್ತೇನೆ ;

> "Privileges are necessary for the proper exercise of the functions entrusted to Parliament by the Constitution. They are enjoyed by individual members, because the House cannot perform its functions without unimpeded use of the services of its members; and by each House collectively for protection of its members and the vindication of its own authority and dignity"

ಅಧ್ಯಕ್ಷರು.—ಜನರಲ್ ಆಗಿ ಹೇಳುತ್ತೀರಾ ?

ಶ್ರೀ ಪಿ. ರಾಂದೇವ್.—ಅದರಲ್ಲಿ ಮೂರನೆಯ ಪ್ಯಾರಾ ತೆಗೆದುಕೊಂಡರೆ.

> "In interpreting these privileges, therefore, regard must be had to the general principle that the privileges of Parliament are granted to members in order that" they may be able to perform their duties in parliament without let or hindrance. They apply to individual members "only in so far as they are necessary in order that the House may freely perform its functions."

ಇದೊಂದು ಸ್ವಾಮಿ, ಆಮೇಲೆ ಪುಟ 178ರಲ್ಲಿ

"When any individual or authority disregards or attacks any of the privileges, rights and immunities, either of the members individually or of the House in its collective capacity...."

I am stressing the word individually.

"....or of its committees, the offence is termed a breach of privileges, and is punishable by the House."

ಮಾನ್ಯ ಒಡೆಯರಾಜ್‌ರವರು ಹೇಳಿರತಕ್ಕದ್ದು ಇದರಲ್ಲಿ ಬರುತ್ತದೆ.

He has attacked against the individual members.

"Besides, actions in the nature of offences against the authority or dignity of the House, such as disobedience to its legitimate orders or libels upon itself .."

It again amounts to libel. ತಮಗೆ ಗೊತ್ತಿದೆ ಹೇಗೆ ಸುಳ್ಳು ಆಪಾದನೆ ಮಾಡಿದ್ದಾರೆ ಎನ್ನತಕ್ಕದ್ದು ಅದನ್ನು ಹೇಳುತ್ತಿದ್ದೇನೆ. ಸುಳ್ಳು ಆಪಾದನೆ ಮಾಡಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಸುಳ್ಳು ಎನ್ನತಕ್ಕ ಪದ ಬಳಸಬಾರದು.

ಶ್ರೀ ರಾಂದೇವ್....its members of officers are also punishable, although these actions are not breaches of any specific privilege. Such actions, though of ten called 'breaches of privilege' are more properly distinguished as 'contempts'.

ಈ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರಾದ ಒಡೆಯರಾಜ್‌ರವರು ಇನ್ನೊಂದು ಆಪಾದನೆ ಮಾಡಿದ್ದಾರೆ. ಏನೆಂದರೆ ಸದಸ್ಯರ ಮೇಲೆ ನೇರವಾಗಿ ಆಪಾದನೆ ಮಾಡಿರತಕ್ಕದ್ದು. ನಮ್ಮ ಜನತಾ ಪಕ್ಷದ ಶಾಸಕರು ಭ್ರಷ್ಟಾಚಾರಿಗಳು ಎಂದು ಹೇಳಿರತಕ್ಕದ್ದು ಇದರಲ್ಲಿ ಬರುತ್ತದೆ.

ಪುಟ 2233ರಲ್ಲಿ ಈ ರೀತಿ ಹೇಳಿದೆ :

"Speeches or Writing Reflecting on the House, its Committees or Members."

"It is a breach of privilege and contempt of the House to make speeches, or to print or publish any libels reflecting on the character or proceedings of the House or its Committees, or on any member of the House for or relating to his character or conduct as a member of Parliament."

ಜನತಾ ಪಕ್ಷದ ಸದಸ್ಯರ ನಡವಳಿಕೆಯ ಬಗ್ಗೆ ನೇರವಾಗಿ ಮಾಡಿರತಕ್ಕ ಆಪಾದನೆಗಳು ಅದು.

So, it amounts to a breach of privilege. ಮುಂದಕ್ಕೆ ಹೋದರೆ.

"Speeches and writings reflecting on the House or its Committees or members are punished by the House as a contempt on the principle that such acts"tend to obstruct the Houses in the performance of their function by diminishing the respect due to them". The House may punish not only contempts arising out of facts of which the ordinary will take cognizance."

Again in page 224,

"In order to constitute a breach of privilege, however, a libel upon a member must concern his character or conduct in his capacity as a member of the House...."

Mr. Speaker.—Before you go long, I am trying to possibly correct you. What you are reading pertains to speeches made out side the House.

ಶ್ರೀ ಪಿ. ರಾಮದೇವ್.—ಜನತಾ ಪಕ್ಷದ ಸದಸ್ಯರ ನಡವಳಿಕೆಯ ಮೇಲೆ ಪ್ರತಿಬಿಂಬಿಸತಕ್ಕ ಆಪಾದನೆಯನ್ನು ಮಾನ್ಯ ಸದಸ್ಯರಿಂದ ಒಡೆಯರಾಜ್‌ರವರು ಮಾಡಿದ್ದಾರೆ.

ಡಿಫಮೇಷನ್ ಬಗ್ಗೆ ಮುಂದಿನ ಪ್ಯಾರಾದಲ್ಲಿ ಬರುತ್ತದೆ.

ಶ್ರೀ ಬಿ. ಶಿವಣ್ಣ.—ಇದೇನು ಕೋರ್ಟ್ ಸ್ವಾಮಿ, ವಾದ ಮಾಡುತ್ತಿದ್ದಾರೆ ?

Mr. Speaker.—You are a senior Member. Let him have his say.

ಶ್ರೀ ಪಿ. ರಾಮದೇವ್.—ಇದು ಔಟ್ ಆಫ್ ದಿ ಹೌಸ್ ಆಗತಕ್ಕದ್ದು ನಿಜ ಇದು ಸದನದ ಒಳಗೆ ಆದಾಗ ಇನ್ನೂ ಸೀರಿಯಸ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ, ಎಲ್ಲರ ಮುಂದೆ ಎದುರುಗಡೆ ಹೇಳಿರತಕ್ಕದ್ದು ಅದಕ್ಕಿಂತ ಇದಕ್ಕೆ ವೈಟೇಜ್ ಕೊಡಬೇಕಾಗುತ್ತದೆ.
ಪುಟ 224ರಲ್ಲಿ ಇರತಕ್ಕದ್ದು ಏನೆಂದರೆ :

"In order to constitute a breach of privilege, however, a libel upon a member must concern his character or conduct in his capacity as a member of the House .."

Sri Mallikarjun M. Kharge.—I want to know whether you have given consent to take up this matter ?

Mr. Speaker.—He is trying to get my consent.

Sri Mallikarjun M. Kharge.—He Was also very much present here. He could have retottoed to the speech. ಇಲ್ಲಿ ಮುಂಜಾನೆ, ಕನ್ನಡಪ್ರಭ ಪತ್ರಿಕೆಗಳನ್ನು ತಂದು ಹೇಳತಕ್ಕದ್ದು ಸರಿಯಲ್ಲ. ಅವರು ಇಲ್ಲಿದ್ದರೆ ಉತ್ತರ ಕೊಡಬೇಕಾಗಿತ್ತು. ಅವರು ಇದನ್ನೆಲ್ಲಾ ಹೇಳುವುದಕ್ಕೆ ತಾವು ಪರ್ಮಿಷನ್ ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದೇನೆ.

Mr. Speaker.—He is trying to convince to take my consent Let me see whether he is able to get my consent.

Sri Mallikarjun M. Kharge.—You are very kind to him

Mr. Speaker.—That has to be decided after the decision.

Sri Mallikarjuna M. Kharge.—Hon Speaker did not allow other Members to take the privilege issue yesterday, day befor yesterday.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಮಟ್ಟಕ್ಕೆ ತಾವು ಮಾಡಿದ್ದು ಸರಿ, ಏಕೆಂದರೆ ಅವರು ಬ್ಯಾಚುಲರ್, ಅವರಿಗೆ ಬೇರೆ ಯಾರೂ ಗತಿ ಇಲ್ಲ. ಆದ್ದರಿಂದ ತಾವು ಅವರಿಗೆ ರಕ್ಷಣೆ ಕೊಡುವುದನ್ನು ನಾವು ಮೆಚ್ಚುತ್ತೇವೆ.

ಅಧ್ಯಕ್ಷರು,—ಈ ಸದನದಲ್ಲಿ ಅಷ್ಟೇ-

(ಗೊಂದಲ)

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು ಅವರಿಗೆ ಹೇಳಿದ್ದು. ಅದನ್ನು ತಮಗೆ ಹೇಳಲಿಲ್ಲ. ತಮಗೂ ಬೇಕಾದರೆ ರಕ್ಷಣೆ ಕೊಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಖಾರ್ಗೆಯವರು ತಮ್ಮ ಮೇಲೆ ಒಂದು ಅಲಿಗೇಷನ್‌ನ್ನು ಮಾಡಿದರು. ನಿನ್ನೆಯ ದಿವಸ ಸವಿಸ್ತಾರವಾಗಿ ಹೇಳುವುದಕ್ಕೆ ನಮಗೆ ಅವಕಾಶ ಕೊಡಲಿಲ್ಲ. ಇವತ್ತು ಬೇರೆ ಸದಸ್ಯರಿಗೆ ಸಾಕಷ್ಟು ಅವಕಾಶ ಕೊಡುತ್ತಿದ್ದಾರೆಂದು ಛಾರ್ಜ್ ಮಾಡಿದ್ದಾರೆ, ಅದು ಸರಿಯಲ್ಲ. ಆ ಮಾತನ್ನು ಅವರು ವಾಪಸು ತೆಗೆದುಕೊಳ್ಳಬೇಕು. ತಾವು ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೀರಿ.

ಶ್ರೀ ಜೆ, ಡಿ. ಸೋಮಪ್ಪ.—ನಿಮಗೆ ಎಷ್ಟು ಹಕ್ಕು ಇದೆಯೋ ನಮಗೂ ಅಷ್ಟೇ ಹಕ್ಕು ಇದೆ. ಅವರು ಈ ಸದನದ ಎಲ್ಲರಿಗೂ ಅಧ್ಯಕ್ಷರು, ಕೇವಲ ನಿಮಗೆ ಒಬ್ಬರಿಗೆ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಆ ದಿವಸ ವಿಷಯವನ್ನು ಪ್ರಸ್ತಾಪ ಮಾಡಲು ಹೋದಾಗ ತಾವು ಅವಕಾಶವನ್ನು ಕೊಡಲಿಲ್ಲ. ಆದರೆ ಇವತ್ತು ಆ ಕಡೆಯ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ, ಆದ್ದರಿಂದ ನಾನು ಹೇಳಿದೆ. ಇದರಲ್ಲಿ ಏನು ತಪ್ಪಿದೆ ?

ಶ್ರೀ ಜೆ. ನಾರಾಯಣ ಕುಮಾರ್.—ಸ್ವಾಮಿ, ಯಾರು ತಪ್ಪು ಮಾಡಿದರೂ ಅದು ತಪ್ಪೆ. ಅವರು ದೊಡ್ಡವರಾಗಿರಲಿ, ಅಥವಾ ಚಿಕ್ಕವರಾಗಿರಲಿ, ತಪ್ಪು ತಪ್ಪೇ. ಅವರು ಕ್ಷಮಾಪಣೆ ಕೇಳುವುದರಲ್ಲಿ ಏನು ತಪ್ಪಿದೆ ? ಅವರು ಜನತಾ ಪಕ್ಷದ ಮೇಲೆ ಆರೋಪವನ್ನು ಹೊರಿಸಿದರೆ, ಜನತಾ ಪಕ್ಷದವರು ಇವರ ಮೇಲೆ ಆರೋಪವನ್ನು ಹೊರಿಸಿದರು. ಮಾನ್ಯ ಸದಸ್ಯರಾದ ಖಾರ್ಗೆಯವರು 1 ಲಕ್ಷ ರೂಪಾಯಿಗಳ ಲಂಚವನ್ನು ತೆಗೆದುಕೊಂಡಿದ್ದಾರೆ ಎಂದರೆ ಅದನ್ನು ಅವರು ಒಪ್ಪಿಕೊಳ್ಳುತ್ತಾರೆಯೆ ? ಇದು ಜನತಾ ಪಕ್ಷದ ಸದಸ್ಯರ ಗೌರವ ಮಾತ್ರವಲ್ಲ. ಇದು ಇಡೀ ಸದನದ ಗೌರವ. ಆದ್ದರಿಂದ

ಅವರು ಕ್ಷಮಾಪಣೆಯನ್ನು ಕೇಳಲೇಬೇಕು. ಅಲ್ಲದೆ ಅವರು ಇದನ್ನು ಸಾಬೀತು ಪಡಿಸಬೇಕೆಂದು ನಾನು ಹೇಳಿದ್ದೇನೆ.

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ನಾನು ನಿಂತುಕೊಂಡಾಗ ತಾವು ನಿಲ್ಲಬಾರದು. ನಾನು ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ, ಅವರು ಏನು ಹೇಳುತ್ತಾರೋ ಕೇಳೋಣ. ಇದು ಯಾರು ಆಪಾದನೆ ಮಾಡಿದರು ? ಹೇಗೆ ಮಾಡಿದರು ಎಂದು ಅಲ್ಲ. ಈಗ ಆಪಾದನೆ ಮಾಡಿದ್ದಾರೆ, ಅದರಿಂದ ಹಕ್ಕು ಚ್ಯುತಿಯಾಗಿದೆ ಎಂದು ಹೇಳಿದ್ದಾರೆ. ಅದನ್ನು ಕೇಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವೂ ಹಣ ತೆಗೆದುಕೊಂಡಿರಿ ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೀರಾ ಎಂದು ಅವರು ಕೇಳಿದರು. ಅದಕ್ಕೆ ನೀವು ಏನು ಹೇಳಬೇಕೋ ಅದನ್ನು ಹೇಳಿ. ಆದರೆ ಸುಮ್ಮನೆ ಏನೋ ಒಂದು ಹೇಳುವುದಲ್ಲ.

ಶ್ರೀ ಜಿ. ನಾರಾಯಣಕುಮಾರ್.—ನಾನು ನಿಮ್ಮ ಕಥೆಯನ್ನು ಹೇಳಿದರೆ ಅದು ರಾಮಾಯಣ, ಮಹಾಭಾರತ ಆಗುತ್ತದೆ, ನಿಮ್ಮ ಕಥೆ ಇಡೀ ದೇಶಕ್ಕೇ ಗೊತ್ತಿದೆ. ನೀವು ಸತ್ಯ ಹರಿಶ್ಚಂದ್ರರಂತೆ ಮಾತನಾಡಬೇಡಿ, ಸುಮ್ಮನೆ ಇರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಅವರು ಏನಾದರೂ ಮನಸ್ಸಿಗೆ ಬಂದಿದ್ದನ್ನು ಮಾತನಾಡುವುದು, ಅನಂತರ ಹೊರಗೆ ಹೋಗಿಬಿಡುವುದು.

ಶ್ರೀ ಜಿ. ನಾರಾಯಣಕುಮಾರ್.—ಅವರು ತೆಗೆದುಕೊಂಡಿರಬಹುದೆಂದು ಹೇಳಿದ್ದಕ್ಕೇ ತಮಗೆ ಸಿಟ್ಟು ಬಂತು, ಆದರೆ ಅವರು ತೆಗೆದುಕೊಂಡಿದ್ದಾರೆಂದು ನೀವು ಅವರಿಗೆ ನೇರವಾದ ಅಪಾದನೆಯನ್ನು ಮಾಡಿದರೆ ಅವರಿಗೆ ಸಿಟ್ಟು ಬರುವುದಿಲ್ಲವೆ ? ಪ್ರತಿಯೊಬ್ಬ ಸದಸ್ಯರಿಗೂ ಆತ್ಮಗೌರವ ಎಂಬುದು ಇದೆ.

Mr. Speaker.—If you proceed, It will not go into record,

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, ಒಂದು ಕ್ರಿಯಾಲೋಪ. ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ನಮ್ಮ ಕಡೆಯಲ್ಲಿ ಮಾನ್ಯ ಖಾರ್ಗೆಯವರು ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ನಿಮ್ಮದನ್ನು ಹೇಳಿದರೆ ಅದು ರಾಮಾಯಣ, ಮಹಾಭಾರತ ಆಗುತ್ತದೆ ಎಂದು. ಅವರು ರಾಮಾಯಣ, ಮಹಾಭಾರತವನ್ನು ಬರೆದು ಕೊಡಲಿ, ಅವರು ಅದನ್ನು ರುಜುವಾತು ಮಾಡಲಿ. ಅನಂತರ ಅವರ ಮೇಲೂ ನಾವು ನೇರವಾದ ಆಪಾದನೆಯನ್ನು ಮಾಡುತ್ತೇವೆ. ನಮ್ಮ ಮಹಾಭಾರತ, ರಾಮಾಯಣವನ್ನು ತೆಗೆದು ಈ ಸದನದಲ್ಲಿಟ್ಟು ಸಾಬೀತು ಮಾಡಿದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಜಿ. ನಾರಾಯಣಕುಮಾರ್.—ಸ್ವಾಮಿ, ಈ ಸರ್ಕಾರ ರಚನೆಯಾಗುವುದಕ್ಕೆ ಮುಂಚಿತವಾಗಿ ಹಿಂದಿನ ದಿನ ಪತ್ರಿಕೆಗಳನ್ನೆಲ್ಲಾ ತೆಗೆದು ನೋಡಿದರೆ ಇವರ ಕಂತೆ ಪುರಾಣವೆಲ್ಲಾ ಸಿಕ್ಕುತ್ತದೆ. ಅದು ಸಿಕ್ಕಿದರೆ ಸಾಬೀತು ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ತಮಗೆ ತಿಳಿದ ಹಾಗೆ ಈ ಸದನದ ಸದಸ್ಯರ ಮುಖಾಂತರ ಕೆಲಸ ಮಾಡತಕ್ಕದ್ದು. ಸದನದ ಪ್ರತಿಷ್ಠೆ, ಸದಸ್ಯರ ಪ್ರತಿಷ್ಠೆಗಳನ್ನು ಎತ್ತಿ ಹಿಡಿಯುವುದು ಎಲ್ಲರ ಕರ್ತವ್ಯ. ಇವತ್ತು ಒಂದು ಗಂಭೀರವಾದ ಮತ್ತು ತೀವ್ರವಾದ ಆಪಾದನೆ ಜನತಾ ಪಕ್ಷದ ಸದಸ್ಯರ ಮೇಲೆ ಬಂದಿದೆ. ನಾಳೆ ಮಂತ್ರಿಗಳ ಮೇಲೂ ಬರಬಹುದು. ಇದು ನಮ್ಮೆಲ್ಲರ ಗೌರವದ ಪ್ರಶ್ನೆ. ಇಂಥ ಆಪಾದನೆಯನ್ನು ಹೊತ್ತುಕೊಂಡು ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾವು ಸಾಬೀತು ಮಾಡುತ್ತೇವೆಂದು ಅವರು ಹೇಳುತ್ತಿದ್ದಾರೆ. ನಾನೂ ಅವರಿಗೆ ಹೇಳುತ್ತೇನೆ. ಇದು ಸಾಬೀತಾದರೆ ನಮ್ಮ ಇಡೀ ಜನತಾ ಪಕ್ಷದ ಸದಸ್ಯರೆಲ್ಲರೂ ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗುತ್ತೇವೆಂದು ಮಾನ್ಯ ಸಚಿವರಾದ ದೇವೇಗೌಡರು ಹೇಳಿದ್ದಾರೆ. ಸಾಬೀತು ಮಾಡುವುದಕ್ಕೆ ಅವರ ಹತ್ತಿರ ಏನಾದರೂ ಡಾಕ್ಯುಮೆಂಟ್ಸ್ ಇದ್ದರೆ ಅದನ್ನು ಸಭೆಯ ಮುಂದಿಡಬೇಕು. ಅದು ಸಭೆಯಲ್ಲೂ ಕೂಡ ಪರಿಶೀಲನೆಯಾಗಬೇಕು. ಇದನ್ನು ಹಕ್ಕು ಬಾಧ್ಯತಾ ಸಮಿತಿಗೆ ಕಳುಹಿಸಬೇಕಾಗಿಲ್ಲ. ಏಕೆಂದರೆ, ಇದು ಇಲ್ಲೇ ನಡೆದಿರುವುದರಿಂದ ಇದನ್ನು ಸಾಬೀತು ಮಾಡಿದಾಗ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಯಾವ ಸದಸ್ಯರು ಲಂಚ ತೆಗೆದುಕೊಂಡಿರುತ್ತಾರೆ ಅಂಥ ಸದಸ್ಯರನ್ನು ತೆಗೆದುಹಾಕತಕ್ಕ ಅಧಿಕಾರ ಈ ಸಭೆಗೆ ಇದೆ. ಇದು ನಮ್ಮ ಗೌರವ, ಪ್ರತಿಷ್ಠೆಗಳನ್ನು ಉಳಿಸಿಕೊಂಡು ಕೆಲಸ ಮಾಡುವುದಕ್ಕೆ ಅಡ್ಡ ಬಂದಿರುವುದರಿಂದ ತಾವು ನಮಗೆ ರಕ್ಷಣೆಯನ್ನು ಕೊಡಬೇಕು. ನಮ್ಮ ಹಕ್ಕನ್ನು ಕಾಪಾಡಬೇಕು. ಒಂದು ವೇಳೆ ಅವರು ಸಾಬೀತು ಮಾಡಿದರೆ ನಾವು ರಾಜೀನಾಮೆ ಕೊಟ್ಟು ಹೋಗುತ್ತೇವೆ. ಆದ್ದರಿಂದ ಅವರಲ್ಲಿರತಕ್ಕ ಡಾಕ್ಯುಮೆಂಟ್ಸ್‌ನ್ನು ಸಭೆಯ ಮುಂದಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಮದೇವ್‌ರವರು ಮತ್ತು ಇನ್ನೂ 33 ಜನ ಜನತಾ ಪಕ್ಷದ ಸದಸ್ಯರೂ ಸೇರಿ ಒಂದು ಹಕ್ಕು ಚ್ಯುತಿ ನಿರ್ಣಯವನ್ನು ತಮ್ಮ ಸನ್ನಿಧಾನಕ್ಕೆ ಕೊಟ್ಟಿದ್ದಾರೆ. ಅದನ್ನು ಈ ಸದನದಲ್ಲಿ ಮಂಡಿಸುವುದಕ್ಕೆ ಅನುಮತಿಯನ್ನು ಕೋರಿ ಮಾನ್ಯ ರಾಮದೇವ್‌ರವರು ಒಂದು ಪ್ರಾಸ್ತಾವಿಕ ಮಾತನ್ನೂ ಕೂಡ ಹೇಳಿದ್ದಾರೆ. 33 ಮಂದಿ ಜನತಾ ಶಾಸಕರು ಒಟ್ಟಿಗೇ ಸೇರಿ ಒಬ್ಬ ಸದಸ್ಯರ ಮೇಲೆ ಅಥವಾ ಒಂದು ಪತ್ರಿಕೆಯ ಮೇಲೆ ಬಿದ್ದರೆ ಅವರ ಗತಿ ಏನು ? ಅವರ ಉದ್ದೇಶ ಸದಸ್ಯರ ಮೇಲಿದೆಯೋ ? ಅಥವಾ ಪತ್ರಿಕೆಯ ಮೇಲಿದೆಯೋ ಗೊತ್ತಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ಸದಸ್ಯರ ಮೇಲೆ ಇರುವುದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ಇನ್ನೂ ಸ್ಪಷ್ಟವಾಗಿಲ್ಲ. ಅದು ತಮ್ಮ ಮುಂದೆ ಮಂಡಿಸ ತಕ್ಕ ಸೂಚನೆಯಲ್ಲಿ ಬಹಳ ವೇಗ್ ಆಗಿದೆ. ಒಂದು ವೇಳೆ ಈ 33 ಜನತಾ ಶಾಸಕರು ಒಂದು ಪತ್ರಿಕೆಯ ಮೇಲೆ ಬಿದ್ದರೆ ಆ ಪತ್ರಿಕೆಯ ಗತಿ ಏನಾಗಬಹುದು ?

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಅವರು ಕ್ಷಮಾಪಣೆ ಕೇಳಲೇಬೇಕು.

Mr. Speakar.—I would like to bring to the notice of leader of the Opposition that the Member who spoke for and on behalf of this privilege motion himself has made clear that it is not against any paper. This is against an individual Member of this House.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊದಲು ವಿಚಾರ ಸ್ಪಷ್ಟವಾಗಬೇಕು. ಆದರೆ ಅದು ಇಲ್ಲಿ ಸೂಚನೆಯಿಂದ ಇಲ್ಲ. ಮಾನ್ಯ ರಾಮದೇವ್‌ರವರು ಅವರ ಅಭಿಪ್ರಾಯವನ್ನು ಹೇಳಿದರು. ಪತ್ರಿಕೆಯವರ ಮೇಲೆ ಅವರ ಉದ್ದೇಶ ಇಲ್ಲ. ಪತ್ರಿಕೆಯವರು ಅವರ ಏಟಿನಿಂದ ತಪ್ಪಿಸಿಕೊಂಡರು.

ಶ್ರೀ ಕೆ. ಮಲ್ಲಪ್ಪ.—ತಪ್ಪಿಸಿಕೊಳ್ಳುವ ಅವಶ್ಯಕತೆ ಇಲ್ಲ. ಅವರು ಹೇಳಿದ್ದನ್ನು ಪತ್ರಿಕೆಯವರು ಬರೆದಿದ್ದಾರೆ; ಹಿಂದೆ ಪತ್ರಿಕೆಯವರ ಮೇಲೆ ತಾವು ಏನು ಗಧಾ ಪ್ರಹಾರವನ್ನು ಮಾಡಿದ್ದೀರಿ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಅದು ತಮಗೆ ಗೊತ್ತಿದೆಯೆ ?

ಒಬ್ಬ ಸದಸ್ಯರು.—ಒಂದು ಪತ್ರಿಕೆ ಅಲ್ಲ. ಎರಡು ಪತ್ರಿಕೆಗಳು. ಆ ಎರಡು ಪತ್ರಿಕೆಗಳಿಗೂ ನಮಗೂ ಇರತಕ್ಕ ಸಂಬಂಧ ಗೊತ್ತಿದೆ.

12-30 p.m.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ ಪತ್ರಿಕೆಯವರು ಇಬ್ಬರು ಮೂವರು ತಪ್ಪಿಗೆ ಸಿಕ್ಕಿಕೊಂಡರು ಎಂದು 30 ಮಂದಿ ಜನತಾ ಎಂ.ಎಲ್.ಎಗಳು ಹೇಳುವುದಾದರೆ ಅವರ ಹಿಂದೆ 60–65 ಲಕ್ಷ ಮಂದಿ ಇದ್ದಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ರಾಮದೇವ್‌ರವರು ಮಾತನಾಡುವಾಗ ಅವರೆಲ್ಲರೂ ಕುಳಿತು ಕೇಳಿದ್ದಾರೆ. ಅವರು ಏನು ಹೇಳುತ್ತಾರೋ ಕೇಳೋಣ so that I can take some decision. Kindly allow the leader of the opposition to speak. He is on his legs.

ಶ್ರೀ ಎಂ. ವೀರಪ್ಪ ಮೊಯಿಲಿ.—ಶ್ರೀ ರಾಮ್‌ದೇವರವರು ಅವರ ಪರವಾಗಿ ಅವರ ಜನಕ್ಕೆ ಕೃತಜ್ಞತೆಯನ್ನು ಅರ್ಪಿಸಬೇಕು, ರಾಮ್‌ದೇವರವರ ರಕ್ಷಣೆಗೆ ನಾನು ಬಂದಿದ್ದೇನೆ. ಸ್ಪೆಷಲ್ ಪ್ರಿವಿಲೈಜ್ ಈ ಹೌಸ್‌ನಲ್ಲಿ ಬ್ಯಾಚ್ಯುಲರ್‌ಗೆ ಕೊಡಬೇಕೆಂದು ನಾನು ಹೇಳಿದೆ. ಯಾರೇ ಆಗಲಿ ಬ್ಯಾಚ್ಯುಲರ್ ಪ್ರಶ್ನೆ ಬಂದಾಗ ನಾನು ಸಪೋರ್ಟ್ ಮಾಡುತ್ತೇನೆ.

ಶ್ರೀ ಎಂ. ರಘುಪತಿ.—ನನಗೂ ಪ್ರಿಫರೆನ್ಸ್ ಕೊಡುತ್ತೀರಾ ?

ಡಾ. ಎಚ್, ಎಲ್. ತಿಮ್ಮೇಗೌಡ.—ಈ ಸದನದ ಜನತಾ ಶಾಸಕ ಪಕ್ಷದ ಮೇಲೆ ತೀವ್ರ ಆಪಾದನೆ ಬಂದಿದೆ. 30 ಜನ ಶಾಸಕರ ಬಗ್ಗೆ ಮಾತನಾಡುವುದು ಸರಿಯಲ್ಲ. ಈ ರೀತಿ ಮಾತನಾಡಿ ಭೇದ ಭಾವ ತರತಕ್ಕಂಥದ್ದು ಸರಿಯಲ್ಲ. ಮಾನ್ಯ ಅಧ್ಯಕ್ಷರೇ ತಾವು ಇದರ ಬಗ್ಗೆ ಡೈರೆಕ್ಷನ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಸಲಹೆ ಮಾಡದಿರುವುದನ್ನು ತಾವು ಮಾಡಿದ್ದೀರಿ. ನಾವು ಅದರ ಆಲೋಚನೆಯನ್ನೇ ಮಾಡಿರಲಿಲ್ಲ. ತಾವು ಆಲೋಚನೆ ಮಾಡಿದ್ದರಿಂದ ಈ ಸಮಸ್ಯೆ ಬರುತ್ತವೆ. ತಮ್ಮಲ್ಲಿಯೇ ಏನಾದರೂ ತೊಂದರೆ ಇದೆಯೋ ಏನೋ ಗೊತ್ತಿಲ್ಲ. ನಿಮ್ಮಲ್ಲಿ ಅಂಥ ಜನರು ಇದ್ದಾರೆ. ನಾನು ತಮ್ಮ ಸಮಸ್ಯೆಗೆ ಕೈಹಾಕುವುದಿಲ್ಲ.

ಶ್ರೀ ಜಿ. ನಾರಾಯಣಕುಮಾರ್.—ತಪ್ಪು ಮಾಡಿರುವುದಕ್ಕೆ ಕ್ಷಮಾಪಣೆಯನ್ನು ಕೇಳುವುದಕ್ಕೆ ಬದಲು ಈ ರೀತಿಯಲ್ಲಾ ಮಾತನಾಡುತ್ತಿದ್ದಾರೆ. ಪತ್ರಿಕಾಕರ್ತರ ಮೇಲೆ, ಪತ್ರಿಕಾಲಯದ ಮೇಲೆ ತಮ್ಮ ಸರ್ಕಾರ ಆಡಳಿತದಲ್ಲಿದ್ದಾಗ ಏನೇನು ಮಾಡಿದರು ಎನ್ನುವುದು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಪ್ರಾಸ್ತಾವಿಕವಾಗಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಈ ವಿಚಾರಕ್ಕೆ ಪುಷ್ಟಿ ಕೊಡುತ್ತಿದ್ದೇನೆ. ಸದನದಲ್ಲಿ ನಿರ್ಭೀತಿಯಿಂದ ನಿಸ್ಪಕ್ಷಪಾತತೆಯಿಂದ ಮಾತನಾಡಬಾರದು ಎಂದು ತಮ್ಮ ಅಭಿಪ್ರಾಯ. ಅವರು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದಾರೆ. ಅದಕ್ಕೆ ಪುಷ್ಟಿ ಕೊಡುತ್ತೇನೆ. 35 ಜನ ಶಾಸಕರು ಈವತ್ತು ಒಬ್ಬರ ಮೇಲೆ ಒಬ್ಬರು ರುಜುಹಾಕಿ ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ. ಆ ಸದಸ್ಯರು ನಮ್ಮ ಪಕ್ಷದಲ್ಲಿಯೇ ಇರಬಹುದು, ಅಥವಾ ನಿಮ್ಮ ಪಕ್ಷದಲ್ಲಿಯೇ ಇರಬಹುದು; ಅಥವಾ ಬೇರೆ ಯಾವುದೇ ಪಕ್ಷದಲ್ಲಿ ಇರಬಹುದು. ಆದರೆ 35 ಮಂದಿ ಶಾಸಕರು ಸದನದ ಒಬ್ಬ ಶಾಸಕರ ಮೇಲೆ ಹಕ್ಕುಬಾಧ್ಯತೆಯ ಸೂಚನೆಯನ್ನು ಕೊಟ್ಟಿದ್ದಾರೆ. ಇದು ಪ್ರಿವಿಲೇಜ್ ಮೋಷನ್ ಪ್ರಶ್ನೆಯಲ್ಲ, ಯಾವುದೇ ಒಂದು ಆಪಾದನೆ ಈ ಸದನದಲ್ಲಿ ಮಾಡಿದಾಗ ಯಾವ ಕ್ರಮವನ್ನು ಅನುಸರಿಸಬೇಕು ಎಂದು ತಾವು ಒಂದು ನಿಯಮವನ್ನು ಹಾಕಿಕೊಟ್ಟಿದ್ದೀರಿ. ರೂಲ್ 311ರ ಪ್ರಕಾರ ಒಂದು ನಿಯಮವನ್ನು ಹಾಕಿಕೊಟ್ಟಿದ್ದೀರಿ. It says.

"No allegation of a defamatory or incriminatory nature shall be made by a Member against any person unless a Member has given previous intimation to the Speaker and also to the Minister concerned so that Minister may be able to make an investigation into the matter for the purpose of reply".

ಇದು ಒಂದು ನಮ್ಮನ್ನು ಆಳುವಂಥ ನಿಯಮ. ಈ ನಿಯಮದ ಪ್ರಕಾರ ಯಾವುದೇ ಒಬ್ಬ ವ್ಯಕ್ತಿಯ ವಿಚಾರದಲ್ಲಿ ಈ ಸದನದಲ್ಲಿ ಆಪಾದನೆ ಮಾಡಿದ್ದು ಕಡತದಲ್ಲಿ ಇಲ್ಲ. Not any person or persons. It comes under rule 311.

ಈಗ ಜನರಲ್ ಪ್ರೊಸೀಜರ್ ಪ್ರಕಾರ ಇಲ್ಲಿ ಪ್ರಿವಿಲೇಜ್ ಬರತಕ್ಕಂಥದ್ದು ಇಲ್ಲ. ಈ ನಿಯಮದ ಕಕ್ಷೆಯ ಒಳಗೆ ನಿನ್ನೆ ನಡೆದಂಥ ಘಟನೆ ಏನು ಇದೆ ಅದು ಕಾನೂನು ಕಕ್ಷೆಯಲ್ಲಿ ಬರುವುದಿಲ್ಲ. ಕೌಲ್ ಅಂಡ್ ಶಕ್ದ್ಧರ್ ಪೇಜ್ 781 ರಲ್ಲಿರುವ ನಿಯಮಾವಳಿ ಪ್ರಕಾರ, ಈ ಸದನದ ಹೊರಗಡೆ ಅಥವಾ ಒಳಗಡೆ ಸದಸ್ಯರು ನಿರಾಕರಣೆ ಮಾಡಿದರೆ, ಮತ್ತೆ ಆರೋಪ ಮಾಡಿದ ಸದಸ್ಯರು ಆಪಾದನೆ ಮಾಡಿದ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಅದನ್ನು ಹೇಳಿಕೆ ಕೊಡುವ ಒಂದು ಪ್ರಸಂಗವಿಲ್ಲ. ಈ ಚಟುವಟಿಕೆ ನಡೆದದ್ದು, ಮಾತುಕತೆ ನಡೆದದ್ದು ಅದು ಪ್ರಿವಿಲೇಜ್ ಮೋಷನ್ ಆಗಿ ಯಾವ ರೀತಿ ಆಗುತ್ತದೆಯೋ ಗೊತ್ತಿಲ್ಲ. ಇದರಲ್ಲಿ ಪ್ರಿವಿಲೇಜ್ ಪ್ರಶ್ನೆಯೇ ಬರುವುದಿಲ್ಲ. ಆದ್ದರಿಂದ ನನ್ನ ಮಿತ್ರರು ಇಲ್ಲಿ ಏನು ಹೇಳುತ್ತಿದ್ದಾರೆ ಎಂದರೆ. ಈ ಸದನದಲ್ಲಿ ಕಾರ್ಯಕಲಾಪಗಳು ಏನು ನಡೆದಿವೆ. ಅವು ಹಕ್ಕುಚ್ಯುತಿ ಆಗುತ್ತದೆ ಎನ್ನುವ ಒಂದು ಆಪಾದನೆಯನ್ನು ಮಾಡಿದರು. ಇಲ್ಲಿ ಒಂದು ಆಪಾದನೆ ಹೋಗಿ ಎರಡು ಆಪಾದನೆ ಆಗಬಹುದು ಮೂರು ಆಪಾದನೆಯಾಗಬಹುದು. ಇನ್ನೂ ಏನಾಗುತ್ತದೆ ಎಂದರೆ ಸರ್ಕಾರದ ಮೇಲೆ ಆಪಾದನೆ ಆಗುತ್ತದೆ ಲೋಕಸಭೆಯಲ್ಲಿ, ರಾಜ್ಯಸಭೆಯಲ್ಲೂ ಆಪಾದನೆಗಳು ಆಗುತ್ತವೆ. ಸದಸ್ಯರುಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆಪಾದನೆಗಳನ್ನು ಮಾಡುವುದರಿಂದ ಏನಾದರು ಘಟನೆಗಳು ನಡೆದಾಗ ಆಪಾದನೆಗಳನ್ನು ಮಾಡಿದ್ದಾರೆಯೇ ಹೊರತು, ಪ್ರಿವಿಲೇಜ್ ಆಗುತ್ತದೆ ಎಂದು ಮಾಡುವುದಿಲ್ಲ. ಇದರಿಂದ ಸದಸ್ಯರಿಗೆ ಹಕ್ಕುಚ್ಯುತಿ ಆಗಿದೆ ಎಂದು ಹೇಳಿ ಪರಿಶೀಲನೆ ಮಾಡಿದ್ದು ಇತಿಹಾಸದಲ್ಲಿ ಇಲ್ಲ. ಆದ್ದರಿಂದ ಇಲ್ಲೂ ಕೂಡ ಅಂಥ ಪ್ರಿವಿಲೇಜ್ ಆಗುವುದಿಲ್ಲ. ಇದು ಒಂದು ಹೊಸ ಸೂಚನೆಯನ್ನು ಸನ್ಮಾನ್ಯ ಸದಸ್ಯರಾದ ಶ್ರೀ ಪಿ. ರಾಮ್‌ದೇವ್‌ರವರು ಮತ್ತು 35 ಮಂದಿ ಜನತಾ ಪಕ್ಷದ ಶಾಸಕರು ತಮ್ಮ ಮುಂದಿಟ್ಟಿದ್ದಾರೆ.

Sri M. Veerappa Moily.—Sir, I am quoting Practice and Procedure of the Parliament by Sri M. N, Kaul and Sri. S. L. Shakdher, Volume–II, page-781 in respect of General Rules of Procedure where in it is observed thus :

"Normally when a member makes an allegation in the House against a Minister or a member without giuing advance notice thereof, provisions of the rule on the subject are invoked and the membar is called to order. In many cases these allegation find a place in the proceedings and if they go unchallenged

they might effect the honour and dignity of the member concerned. Therefore, where any such allegations have gone on record, the Minister or member against whom allegations have been made is allowed, if he so requests, to make a statement in the House clarifying the position either on the same day or later on and that brings the matter to an end.

It is further observed as :

"When an allegation is made against a Minister or a member, it is for that Minister or member to take any course of action to refute the allegation"

Therefore, it is clear here that the Minister or member are at liberty to take any course of action to refute the allegation. Here the concerned Minister can refute the allegation or he may order for an enquiry.
ಇಲ್ಲಿ ಸಿ. ಬಿ. ಐ. ತನಿಖೆ ಮಾಡಿ ಎಂದು ಕೇಳಿಕೊಂಡಿದ್ದಾರೆ. ಆದ್ದರಿಂದ ತಾವು ಇದರ ಮೂಲಕ ಇದಕ್ಕೆ ಪರಿಹಾರ ಹುಡುಕಬಹುದು. ಆದರೆ ಇಲ್ಲಿ ನೀವು ಇದಕ್ಕೆ ಒಪ್ಪುವುದಿಲ್ಲ. ಇದನ್ನೂ ತಾವೂ ನಿರಾಕರಣೆ ಮಾಡುವುದಾದರೆ ಬೇರೆ ಪರಿಹಾರದ ದಾರಿಯನ್ನು ಹುಡುಕಬೇಕಾಗುತ್ತದೆ. ಮಾನ್ಯ ಸದಸ್ಯರೇ ಹೇಳಿದ ಪ್ರಕಾರ ತಾವು ಸಿ. ಬಿ. ಐ. ತನಿಖೆಗೆ ಒಪ್ಪಿಕೊಂಡು ಅದರ ಮೂಲಕ ಒಂದು ದಾರಿ ಹುಡುಕುವುದು ತಮಗೇ ಬಿಟ್ಟಿದ್ದು. ಈ ರೀತಿ ಮಾಡದೆ ತಾವು ಇಲ್ಲಿ ನಮ್ಮ ಮೇಲೆ ಗಧಾ ಪ್ರಹಾರ ಮಾಡುವುದಾದರೆ ಆಗ ತಾವು ಮಾಡತಕ್ಕಂಥ ಕೆಲಸ ಹಕ್ಕುಚ್ಯುತಿಯಾಗುತ್ತದೆಯೇ ಹೊರತು ಈ ಸದಸ್ಯರು ಮಾಡಿದಂಥ ಕೆಲಸ ಹಕ್ಕುಚ್ಯುತಿಯಾಗುವುದಿಲ್ಲ.

ಶ್ರೀ ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ, 310ನೇ ನಿಯಮದ ಪ್ರಕಾರ ಒಬ್ಬರು ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಅಪಮಾನವಾಗುವಂತಹ ಮಾತನ್ನು ಆಡುವಂತಿಲ್ಲ. ಆದರೂ ಶ್ರೀ ಒಡೆಯರಾಜ್ ಅವರು ಇಂತಹ ಮಾತನ್ನು ಹೇಳಿರುವುದರಿಂದ ವಿರೋಧ ಪಕ್ಷದ ನಾಯಕರು ಇದಕ್ಕೆ ಏನು ಹೇಳುತ್ತಾರೆ ?

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅವರು ಆಡಿದಂಥ ಮಾತು ಅಪಮಾನಕ್ಕಿಂತ ಹೆಚ್ಚಿನದ್ದಾಗಿದೆ.

ಶ್ರೀ ಜೆ.ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ ಇವರು ಈ ರೀತಿ ಪದೇಪದೇ ಎದ್ದುನಿಂತು ಮಾತನಾಡುವುದು ಸರಿಯೇ ?

ಶ್ರೀ ಬಿ. ಶಿವಣ್ಣ.—ಕ್ರಿಯಾಲೋಪದ ಮೂಲಕ ಇವರು ಪದೇಪದೇ ಎದ್ದು ಮಾತನಾಡುವುದರ ಮೂಲಕ ನಮ್ಮ ನಾಯಕರು ಮಾತನಾಡುವುದನ್ನು ಅಡ್ಡಿಪಡಿಸುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಕ್ರಿಯಾಲೋಪವನ್ನು ಸಹ ಎತ್ತುವುದು ಬೇಡ ಎಂದರೆ ಹೇಗೆ ?

Sri M. Veerappa Moily.—Sir, further it is observed thus:

"A Minister may be permitted to refute then and there allegations made against him in his capacity as a Minister without being required to furnish written text of the statement to be made by him."

"Where allegations are made in the House against a particular political party (Here in this case the Janata Party), the leader of that Party or Group in the House is permitted to make a statement in regard that to ...

ಅಂದರೆ ನಿಮ್ಮ ಪಕ್ಷದ ಮುಖ್ಯಸ್ಥರು ಯಾರಿದ್ದಾರೆ, ಅವರು ಇದರ ಪ್ರಕಾರ ಹೇಳಿಕೆಯನ್ನು ಕೊಡಬಹುದು.

"The Member desiring to make personal explanation is, however, required first to submit to the Speaker text of the Statement to be made by him. He can make the statement if the Speaker after going through the statement accords him the permission."

ಇಲ್ಲಿ - ಕೂಡ ಇವರ ನಾಯಕರು ಹೇಳಿಕೆ ಕೊಡುವುದಿದ್ದರೂ ಕೂಡ ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಮಾತ್ರ ಕೊಡಬಹುದು. ಇದು ನಿಮಗಿರತಕ್ಕಂಥ ದಾರಿ. ಈ ಒಂದು ಹಕ್ಕುಬಾಧ್ಯತೆ ಪ್ರಶ್ನೆಯಲ್ಲಿ ಕೆಲವು ಮೂಲಭೂತವಾದ ಪ್ರಶ್ನೆಗಳು ಉದ್ಭವವಾಗುತ್ತವೆ.

Sir, now I am quoting Shorter Constitution of India by Durga Das Basu, Eighth Edition, page–385, Article 194 (1) and (2) with regard to the powers, privileges and immunities of State Legislatures and their members. It reads thus :

> "(1) Subject to the provisions of this Constitution and to the rules and standing orders regulating the procedure of the Legislature, there shall be freedom of speech in the Legislature of every State.
>
> (2) No member of the Legislature of a State shall be liable to any proceedings in any court in respect of anything said or any vote given by him in the Legislature or any committee thereof, and no person shall be so liable in respect of the publication by or under the authority of a House of a such a Legislature of any report, Paper, votes, or proceedings.
>
> Immunity from legal action–(3) This immunity is complete and is based on the principle that it is of the essence of the Parliamentary system of Government that people's representatives should be free to express themselves without fear of legal consequences.

If here we should be afraid of certain legal parliamentary consequences, then you cannot seek protection outside.

ಆದ್ದರಿಂದ ಇಲ್ಲಿ ನೀವು ಮಾದರಿಯಾಗಿರಬೇಕು. ಇಲ್ಲಿ ನಮಗೆ ಇರುವಂತಹ ರಕ್ಷಣೆಯು ಒಂದು ಕಂಡೀಷನ್‌ಗೆ ಒಳಪಟ್ಟಿದ್ದಾದರೆ ಅಥವಾ ನಮಗಿರುವಂತಹ ರಕ್ಷಣೆಗೆ ಏನಾದರೂ ಬಾಧಕವಾದರೆ ಇನ್ನು ಹೊರಗಿನ ಜಗತ್ತಿನಲ್ಲಿ ನಮಗೆ ರಕ್ಷಣೆ ಕೊಡುವುದಕ್ಕಾಗುವುದಿಲ್ಲ. ಇದು ಒಬ್ಬ ವ್ಯಕ್ತಿಯ ಪ್ರಶ್ನೆಯಲ್ಲ, ಇದರಿಂದ ಇಡೀ ಸದನದ ಒಂದು ಮೂಲಭೂತವಾದ ಪ್ರಶ್ನೆಯ ಮೇಲೆ ಪರಿಣಾಮ ಬೀರಬಹುದು. ಇಲ್ಲಿ ಒಬ್ಬರು ಸದಸ್ಯರು ಮಾಡಿದಂಥ ಟೀಕೆಯನ್ನು ರಾಜಕೀಯವಾಗಿ ಎದುರಿಸಲು 35 ಜನ ಜನತಾ ಶಾಸಕರಿಗೆ ಸಾಧ್ಯವಾಗದೆ ನಿರ್ವೀರ್ಯರಾಗಿ....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.--ನಾವು ನಿರ್ವೀರ್ಯರು ಎಂಬುದನ್ನು ಇವರು ಯಾವಾಗ ಪರೀಕ್ಷೆ ಮಾಡಿದ್ದರು ?

ಒಬ್ಬ ಮಾನ್ಯ ಸದಸ್ಯರು.—ಬೇಕಾದರೆ ಪರೀಕ್ಷೆ ಮಾಡಲು ಅವರೇ ಒಂದು ದಿನವನ್ನು ಗೊತ್ತು ಮಾಡಲಿ.

ಶ್ರೀ ಎಂ. ರಘುಪತಿ.--ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನಾನು ತಮ್ಮ ಮೂಲಕ ಒಂದೇ ಒಂದು ಮನವಿ ಮಾಡಿಕೊಳ್ಳುತ್ತೇನೆ. ಏನೆಂದರೆ, ಅವರು ಶಬ್ದಗಳನ್ನು ಬಳಕೆ ಮಾಡುವಾಗ ..

ಅಧ್ಯಕ್ಷರು.—ತಾವು ನಿರ್ವೀರ್ಯ ಎಂಬ ಪದವನ್ನು ಬಳಸುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಪದ ಬೇಡದಿದ್ದರೆ ಇವರಿಗೆ ಗಂಡಸುತನ ಇಲ್ಲವೆಂದು ಹೇಳಬಹುದು.

(ಗೊಂದಲ)

ಶ್ರೀ ಮೈಕೇಲ್ ಫರ್ನಾಂಡೀಸ್.—ನಮಗೆ ಗಂಡಸುತನ ಇಲ್ಲವೆಂದು ಹೇಳುವುದರ ಮೂಲಕ ಇವರು ಹೆಂಗಸರಿಗೇ ಅವಮಾನ ಮಾಡಿದ್ದಾರೆ. ನಮ್ಮ ದೇಶದ ಪ್ರಧಾನಮಂತ್ರಿಗಳು ಮಹಿಳೆಯಾಗಿರುವುದರಿಂದ ಅವರಿಗೂ ಸಹ ಅವಮಾನ ಮಾಡಿದ್ದಾರೆ. ಇವರ ಮಾತಿನಿಂದ ಮಹಿಳೆಯರಿಗೆ ಅವಮಾನವಾಗಿದೆ.

(ಗೊಂದಲ)

ಅಧ್ಯಕ್ಷರು.—ನಾನು ಈಗ ಎದ್ದು ನಿಂತಿದ್ದೇನೆ ಎಲ್ಲರೂ ದಯಮಾಡಿ ಕುಳಿತುಕೊಳ್ಳಿ ಈಗ ಸಭೆಯ ಮುಂದೆ ಇರತಕ್ಕಂಥಾ ಪ್ರಶ್ನೆ ಗಂಡಸುತನದ್ದೂ ಅಲ್ಲ, ನಿರ್ವೀರ್ಯತನದ್ದೂ ಅಲ್ಲ, ಹಕ್ಕು ಚ್ಯುತಿಯ ಪ್ರಶ್ನೆ ನಮ್ಮ ಮುಂದೆ ಇರತಕ್ಕಂಥಾದ್ದು. ಆದುದರಿಂದ ನೀವು ಮಾತನಾಡತಕ್ಕಂಥಾ ವಿಷಯಗಳು ಅದಕ್ಕೆ ಮಾತ್ರ ಸೀಮಿತವಾಗಿರಲಿ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಆಂಧ್ರದಲ್ಲಿರುವ ಹಾಗೆ ಗಂಡಸುತನ, ವೀರ್ಯತನ ಇಲ್ಲೂ ಆಗಲಿ ಅನ್ನುವ ಇಚ್ಛೆ ಅವರಿಗೆ ಇದ್ದರೆ ಆಗಲಿ. ಅದಕ್ಕೇನಾದರೂ ತಾವು ಪ್ರಚೋದನೆ ಮಾಡುತ್ತಿದ್ದೀರಾ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಲಕ್ಷ್ಮಯ್ಯ.—ಸ್ವಾಮಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕಂಥಾ ಎರಡು ಪದಗಳನ್ನೂ ಕೂಡ ಅವರು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಅವರು ಆ ಪದಗಳನ್ನು ಬಳಕೆ ಮಾಡುವುದು ಸರಿಯಲ್ಲ. ಆದುದರಿಂದ ಆ ಪದಗಳನ್ನು ಕಡಿತದಿಂದ ತೆಗೆದುಹಾಕಿದರೆ ಒಳ್ಳೆಯ ಪದಗಳನ್ನು ಉಪಯೋಗಿಸಲಿ ಎಂದು ಹೇಳುತ್ತೇನೆ. ಮತ್ತೆ ಇನ್ನೊಂದು ವಿಷಯ ಏನೆಂದರೆ ಜನತಾಪಕ್ಷದ ಶಾಸಕರು ರಾಜಕೀಯವಾಗಿ ನಿರ್ವೀರ್ಯರಾಗಿಲ್ಲ, ವೀರ್ಯರು ಎನ್ನುವುದನ್ನು 1983ರ ಮಹಾಚುನಾವಣೆಯಲ್ಲಿ, ಜನತೆ ತೋರಿಸಿಕೊಟ್ಟಿದ್ದಾರೆ, ಅಲ್ಲದೆ ಇತ್ತೀಚೆಗೆ ನಡೆದಂಥಾ ಮುನಿಸಿಪಾಲಿಟಿ ಚುನಾವಣೆಯಲ್ಲಿ ಮತ್ತು ಬೆಂಗಳೂರು ಕಾರ್ಪೊರೇಷನ್‌ಗೆ 13 ವರ್ಷದಿಂದಲೂ ಸಹ ಚುನಾವಣೆ ನಡೆದಿರಲಿಲ್ಲ, ಈಗ ಚುನಾವಣೆ ನಡೆದಿದೆ, ಈ ಚುನಾವಣೆಯಲ್ಲಿ ಜನತಾಪಕ್ಷದ ಶಾಸಕರು ರಾಜಕೀಯವಾಗಿ ವೀರ್ಯರು, ರಾಜಕೀಯವಾಗಿ ಅವರು ಶಕ್ತರು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಹೀಗಿರುವಾಗ ಮಾನ್ಯ ಸದಸ್ಯರು ಈ ಮಾತನಾಡಿದ್ದಾರೆ ಇದರ ಬಗ್ಗೆ ಅವರು ನಾಚಿಕೆ ಪಡಬೇಕು ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ.—ಸ್ವಾಮಿ, ನನಗಂತೂ ಇದು ಬಹಳ ಆಶ್ಚರ್ಯವಾಗುತ್ತದೆ. ಏತಕ್ಕೆಂದರೆ ಮಾನ್ಯ ವಿರೋಧಪಕ್ಷದ ನಾಯಕರು ಇಂತಹ ಪದಗಳನ್ನು ಏನು ಬಳಸಿದ್ದಾರೆ ಅದು ಈ ಸಭೆಗೆ ಅಗೌರವ ತಂದಾಗುತ್ತದೆ. ಅವರು ಇದೇರೀತಿ ಪದಗಳನ್ನು ಉಪಯೋಗಿಸಿ ಭಾಷಣ ಮಾಡುವುದಾದರೆ ನಾವೇನೂ ಅದಕ್ಕಿಂತ ಕಡಿಮೆ ಏನೂ ಇಲ್ಲ. ಆದರೆ ಅವರು ಉಪಯೋಗಿಸತಕ್ಕ ಭಾಷೆ ಈ ಸದನಕ್ಕೆ ಗೌರವ ಘನತೆ ಕಾಪಾಡುವ ಹಾಗೆ ಇರಬೇಕೇ ವಿನಹ ಆರೀತಿ ಪದಗಳನ್ನು ಉಪಯೋಗಿಸುವಂಥಾದ್ದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಯಡಿಯೂರಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಯಾವ ಪದಗಳನ್ನು ಉಪಯೋಗಿಸಿದರೋ ಅದರಿಂದ ಇಲ್ಲಿ ಈಗ ಏನು ಸಮಸ್ಯೆಗಳು ಎರಡು ಕಡೆಯೂ ಉದ್ಭವವಾಗಿದೆ ಇದನ್ನು ಯಾರಾದರೂ ನೋಡಿದರೆ ನಗೆಪಾಟಲಾಗುತ್ತದೆ. ಆದುದರಿಂದ ನಿಮ್ಮ ಮನಸ್ಸಿಗೆ ಯಾವರೀತಿ ಕಂಡು ಬರುತ್ತದೋ ಅದರಂತೆ ತೀರ್ಮಾನ ತೆಗೆದುಕೊಳ್ಳಿ, ಇಲ್ಲದೇಹೋದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಲಕ್ಷ್ಮಯ.—ಮಾನ್ಯ ವಿರೋಧಪಕ್ಷದ ನಾಯಕರು ನಮ್ಮನ್ನು ನಿರ್ವೀರ್ಯರು ಎಂದು ಹೇಳಿದ್ದಾರೆ ಇದು ಇವರಿಗೆ ಹೇಗೆ ಗೊತ್ತಾಯಿತು? ವಿರೋಧ ಪಕ್ಷದ ನಾಯಕರಿಗೆ ನಮಗಿಂತಲೂ ಜವಾಬ್ದಾರಿಯಿದೆ; ಅಲ್ಲದೆ ಅವರ ಬಗ್ಗೆ ನಮಗೂ ಅಭಿಮಾನ ಇದೆ, ಗೌರವ ಇದೆ. ಹೀಗಿರುವಾಗ ಅವರು ನಿರ್ವೀರ್ಯರು ಎಂದು ಹೇಳಿದರೆ ಇವರೇನು ಡಾಕ್ಟರೇ. ಅವರು ಡಾಕ್ಟರೇನೂ ಅಲ್ಲ. ನಾವು ನಿರ್ವೀರ್ಯರು ಅನ್ನುವುದು ಅವರಿಗೆ ಹೇಗೆ ಗೊತ್ತು ಸ್ವಾಮಿ?

ಅಧ್ಯಕ್ಷರು.—ಅದನ್ನೆಲ್ಲಾ ನೀವಿಬ್ಬರೂ ಸೇರಿಕೊಂಡು ಒಂದುಕಡೆ ಕುಳಿತುಕೊಂಡು ತೀರ್ಮಾನ ಮಾಡಿಕೊಳ್ಳಿ. ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, ಮಾನ್ಯ ವಿರೋಧಪಕ್ಷದ ನಾಯಕರು ನಿರ್ವೀರ್ಯರು ಅನ್ನುವ ಪದವನ್ನು ಉಪಯೋಗಿಸಿದ್ದಾರೆ ಎಂದು ಈಗ ಈ ಸಭೆಯಲ್ಲಿ ಏನು ಚರ್ಚೆಯಾಗುತ್ತಾ ಇದೆ, ಅದರ ಬಗ್ಗೆ ಚರ್ಚೆಬೇಕಿಲ್ಲಾ. ಆ ಪದವನ್ನು ಕಿತ್ತು ಹಾಕಬೇಕು ಎಂದು ಎದುರುಪಕ್ಷದವರು ಹೇಳುತ್ತಿದ್ದಾರೆ. ಆದುದರಿಂದ ಆ ಪದ ಪಾರ್ಲಿಮೆಂಟರಿಯೇ ಅಥವಾ ಅನ್‌ಪಾರ್ಲಿಮೆಂಟರಿಯೇ ಎಂದು ತಾವು ಹೇಳಿಬಿಟ್ಟರೆ ಸಾಕು. ಅದು ಒಂದುವೇಳೆ ತಮಗೆ ಅನ್‌ಪಾರ್ಲಿಮೆಂಟರಿ ಪದ ಎಂದು ಕಂಡು ಬಂದರೆ ಆ ಪದವನ್ನು ಕಿತ್ತು ಹಾಕಬಹುದು.

ಅಧ್ಯಕ್ಷರು.—ಅದಕ್ಕೋಸ್ಕರವಾಗಿಯೇ ಮಾನ್ಯ ಲಕ್ಷ್ಮಯ್ಯನವರಿಗೆ ಹೇಳಿದೆ, ನಿರ್ವೀರ್ಯರು ಅನ್ನುವ ಶಬ್ದವನ್ನು ಉಪಯೋಗಿಸಿರುವುದಕ್ಕೆ ಅದರ ಬಗ್ಗೆ ನೀವಿಬ್ಬರೂ ಕೂತುಕೊಂಡು ತೀರ್ಮಾನ ಮಾಡಿಕೊಳ್ಳಲಿ ಎಂದು.

ಶ್ರೀ ಎಂ. ರಘುಪತಿ.--ಅವರು ಇದರ ಬಗ್ಗೆ ಗಂಭೀರವಾಗಿ ಏನು ಮಾತನಾಡಿದ್ದಾರೆ ಅದರ ಬಗ್ಗೆ ತೀರ್ಮಾನ ಮಾಡುವುದಕ್ಕೆ ಅವರವರೇ ಕೂತುಕೊಂಡು ತೀರ್ಮಾನ ಮಾಡಿಕೊಳ್ಳುವಂಥದ್ದು ಸರಿಯಲ್ಲ.

ಅಧ್ಯಕ್ಷರು.--ಹಾಗಾದರೆ ಅದಕ್ಕೆ ರಾಮದೇವ್ ಅವರನ್ನು ಅಂಪೈರ್ ಆಗಿ ಕಳುಹಿಸೋಣವೇ.

ಶ್ರೀ ಬಿ. ಶಿವಣ್ಣ.--ಮಾನ್ಯ ರಘುಪತಿಯವರು ನಾಚಿಕೆಪಡಬೇಕು ಅನ್ನುವ ಶಬ್ಧವನ್ನು ಉಪಯೋಗಿಸಿದರೆ ಅದು ಸರಿಯೇ ?

ಅಧ್ಯಕ್ಷರು.--ನೀವೇ ಅದಕ್ಕೆ ಅಂಪೈರ್ ಆಗಿ ಹೋಗಬೇಕು ಎಂದು ಇಷ್ಟಪಡುವುದಾದರೆ ಬಹಳ ಸಂತೋಷ. ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಶಿವಣ್ಣ.--ನನಗೆ ಬೇಡಿ ಸ್ವಾಮಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.--ನಾನು ಒಂದು ಕ್ರಿಯಾಲೋಪವನ್ನು ಎತ್ತಿದ್ದೆ. ತಾವು ಅವಕಾಶ ಕೊಡಲಿಲ್ಲಾ.

ಅಧ್ಯಕ್ಷರು.--ಹೇಳಿ.

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಎದುರುಪಕ್ಷದ ನಾಯಕರು ಬಹಳ ಜವಾಬ್ದಾರಿಯುಳ್ಳಂಥಾವರು, ಅವರು ಬಹಳ ಅನುಭವಿಗಳು. ಅಂಥಾವರು ಈ ಪದವನ್ನು ಉಪಯೋಗಿಸಿದ್ದಾರೆ, ನಿರ್ಲಕ್ಷ್ಯತೆಯಿಂದ ಅವರಿಗೆ ತಿಳಿದೋ, ತಿಳಿಯದೋ ಈ ಪದವನ್ನು ಬಳಕೆ ಮಾಡಿದ್ದಾರೋ ಏನೋ ಗೊತ್ತಿಲ್ಲ. ತಾವು ಆ ಪದ ಅನ್‌ಪಾರ್ಲಿಮೆಂಟರಿ ಅಲ್ಲ ಎಂದು ಹೇಳಿದರೆ ಅವರ ಭಾಷಣ ಮುಂದುವರೆಯಬಹುದು. ಇಲ್ಲದೇ ಹೋದರೆ ಅವರು ಈ ಸಭೆಯಲ್ಲಿ ಕ್ಷಮಾಪಣೆ ಕೇಳಬೇಕು. ಮತ್ತು ಅವರು ಉಪಯೋಗಿಸಿದಂಥ ಪದವನ್ನು ಕಡತದಿಂದ ತೆಗೆದು ಹಾಕಬೇಕು. ಇದರ ಬಗ್ಗೆ ತಾವು ವಿವರಣೆ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಿದೆ ಎಂದರೆ ಈ ಒಂದು ಹಕ್ಕುಚ್ಯುತಿ ಸೂಚನೆಗೆ 35 ಮಂದಿ ರುಜು ಹಾಕಿ ಏನು ಕೊಟ್ಟಿದ್ದಾರೆ ಇದು ರಾಜಕೀಯವಾಗಿ ನಿರ್ವೀರ್ಯತೆ ತೋರಿಸುವುದಿಲ್ಲವೇ ? ನಾನು ದೈಹಿಕವಾಗಿ ನಿರ್ವೀರ್ಯತೆ ಇದೆ ಎಂದು ಹೇಳಲಿಲ್ಲಾ ನಾನು ಇದನ್ನು ರಾಜಕೀಯವಾಗಿ ನಿರ್ವೀರ್ಯತೆ ಎಂದು ಹೇಳಿದ್ದು.

ಶ್ರೀ ಎಂ. ರಘುಪತಿ.— ನಾನು ಹೇಳಿದ್ದೂ ಕೂಡ ರಾಜಕೀಯವಾಗಿಯೇ ? ಮಾನ್ಯ ಅಧ್ಯಕ್ಷರೇ ಅವರು ನಿರ್ವೀರ್ಯತೆ ಎನ್ನುವುದನ್ನು ಹೇಳಲಿಲ್ಲವೇ ತಾವೇ ಹೇಳಿ.

Sri M. Veerappa Moily.—Nobody should have any guilty conscience when I mentioned that word.

ಶ್ರೀ ಎಂ. ರಘುಪತಿ.—ತಾವು ರಾಜಕೀಯವಾಗಿಯೇ ವೀರ್ಯರಿದ್ದೀರಿ, ಶೂರರಿದ್ದೀರಿ. ಆದುದರಿಂದ ರಾಜಕೀಯವಾಗಿಯೇ ತಮ್ಮ ಶಕ್ತಿಯನ್ನು ತೋರಿಸಿದರೆ ಅದಕ್ಕೆ ನಮ್ಮ ಅಡ್ಡಿ ಏನೂ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಗೋವಿಂದರಾಜ್ ಪಿ. ವಡೆಯರಾಜ್ ಅವರು ನಿನ್ನೆಯ ದಿವಸ ಈ ವರ್ಗಾವರ್ಗಿ ಬಗ್ಗೆ ಲಂಚ ತೆಗೆದುಕೊಂಡು ಮಾಡಿಸಿದ್ದೀರಿ ಎಂದು ಆಪಾದನೆ ಮಾಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.--ಜನತಾ ಪಕ್ಷದವರು ಲಂಚ ತೆಗೆದುಕೊಂಡಿದ್ದಾರೆ ಎನ್ನುವ ಶಬ್ಧವನ್ನು ಮಾನ್ಯ ಒಡೆಯರಾಜ್ ಅವರು ಬಳಸಿದ್ದಾರೆ ಎಂದು ನಿನ್ನೆಯಿಂದ ಇಲ್ಲಿ ಏನು ನಡೆಯಿತೋ ಅದರ ಬಗ್ಗೆ ಪ್ರೊಸೀಡಿಂಗ್ಸ್ ತರಿಸಿ ಎಲ್ಲವನ್ನೂ ನೋಡಿ; ಆ ಮಾತು ಇಲ್ಲ ಎಂದು ಹೇಳಿದ್ದಾರೆ, ಅದು ಕಡತದಲ್ಲಿ ಇಲ್ಲ. ಮತ್ತೆ ಈಗ ಶ್ರೀಮಾನ್ ಜಾಲಪ್ಪನವರು ಪುನ: ಇದೇ ಹೊತ್ತಿಗೆ ಆ ಪದವನ್ನೇ ಮತ್ತೆ ಉಪಯೋಗಿಸಿದರೆ ಅದು ರಿಕಾರ್ಡ್ ಹೋಗುತ್ತದೆ. ಅದೂ ಪ್ರಿವಲೇಜ್ ಆಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ.--ನೀವು ಹೇಳುವುದೂ ಕೂಡ ಪ್ರಿವಿಲೇಜ್ ಆಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.--ಆದುದರಿಂದ ನಾನು ತಮಗೆ ಹೇಳುವುದೇನೆಂವರೆ ಈ ಬಗ್ಗೆ ಮಾತನಾಡಿರತಕ್ಕಂಥಾದೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿ ಇರುತ್ತದೆ. ಆ ಪ್ರೊಸೀಡಿಂಗ್ಸ್ ಕೂಡ ನಿಮ್ಮ ಮುಂದೆ ಇದೆ, ಬೇಕಾದರೆ ಅದನ್ನು ಆಧಾರವಾಗಿಟ್ಟುಕೊಂಡು ಅವರು ಮಾತನಾಡಲಿ. ಹಾಗೆ ಇಲ್ಲದೆ ಮತ್ತೆ ಮತ್ತೆ ಈ ಮಾತನ್ನು ಏತಕ್ಕೆ ಹೇಳುತ್ತೀರಿ ?

ಶ್ರೀ ಆರ್.ಎಲ್. ಜಾಲಪ್ಪ.--ಈಗ ಅವರ ಮೇಲೆ ಒಂದು ಹಕ್ಕುಚ್ಯುತಿ ಪ್ರಶ್ನೆ ಬಂದಿದೆ. I want a clarification from the Hon'ble Leader of the Opposition. What does he mean by that word ?

ಈ ಒಂದು ಹಕ್ಕುಚ್ಯುತಿ ಸೂಚನೆ ಈಗ ತಮ್ಮ ಮುಂದೆ ಇದೆ. ಇದು ಬರುವುದು ಮಾಮೂಲು ಎಂದು ಬಹಳ ಸೂಕ್ಷ್ಮವಾಗಿ ಅವರು ಹೇಳಿದ್ದಾರೆ. ಅವರು ಮಾತನಾಡುದಾಗ ನಿರ್ವೀರ್ಯರು ಎನ್ನುವ ಪದವನ್ನು ಉಪಯೋಗಿಸಿದ್ದಾರೆ. What does he mean by that word? ಆಮೇಲೆ

ನಾವು ಲಂಚ ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಅದನ್ನು ಪ್ರೂವ್ ಮಾಡಿ ಕೊಡಲ್ಲಿ. ಈ ಬಗ್ಗೆ ಮಾನ್ಯ ಸದಸ್ಯರು ನನ್ನ ಕ್ಲಾರಿಫಿಕೇಷನ್‌ಗೆ ಉತ್ತರ ಕೊಟ್ಟಾದ ಮೇಲೆ ಅವರು ತಮ್ಮ ಭಾಷಣವನ್ನು ಮುಂದುವರೆಸಲಿ.

ಮಾನ್ಯ ಅಧ್ಯಕ್ಷರೇ ನಾನು ಆ ರೀತಿಯಲ್ಲಿ ಹೇಳಲಿಲ್ಲ. ಆದರೆ....

1-00 p.m.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರಿಗೆ ಕನ್ನಡ ಚನ್ನಾಗಿ ಬರುತ್ತದೆ, ಅವರು ಅಚ್ಚ ಕನ್ನಡದಲ್ಲಿ ಮಾತನಾಡಿದರೆ ಒಳ್ಳೆಯದು. ಕನ್ನಡದಲ್ಲಿ ಒಳ್ಳೆಯ ಶಬ್ದಗಳು ಕೂಡ ಇವೆ. ಆದರೆ ಈ ರೀತಿ ಮಕ್ಕಳು ಜಗಳ ವಾಡಿದ ಹಾಗೆ ಜಗಳವಾಡುತ್ತಿರುವುದನ್ನು ನೋಡಿ ಮೇಲೆ ಕುಳಿತುಕೊಂಡಿರುವ ನಮ್ಮ ಪ್ರೇಕ್ಷಕರು ಅಸಮಾಧಾನಗೊಳ್ಳುತ್ತಾರೆ.

(ಗೊಂದಲ)

ಅಧ್ಯಕ್ಷರು.—ವರದಿಮಾಡಬೇಡಿ.

* * *

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದವರು ಸುಮಾರು 35 ವರ್ಷಗಳಿಂದ ಅಧಿಕಾರದಲ್ಲಿದ್ದು ಈಗ ಅಧಿಕಾರವನ್ನು ಕಳೆದುಕೊಂಡು ಅವರಿಗೆ ಬೇಸರವಾಗಿರುವುದರಿಂದ ಆ ರೀತಿ ಮಾತನಾಡುತ್ತಿದ್ದಾರೆ. ಅವರು ಮಾಡಿದ ಪಾಪದ ಕರ್ಮ ಅವರನ್ನು ಕಾಡಿಸುತ್ತಿವೆ. ಆದ್ದರಿಂದ ತಾವು ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳಿಕೊಳ್ಳುತ್ತೇನೆ........

(ಗೊಂದಲ)

ಶ್ರೀ ಎಸ್. ಚಿಕ್ಕೇಗೌಡ :—ಮಾನ್ಯ ಸದಸ್ಯರು....

(ಶ್ರೀ ಎಂ. ಮಹದೇವ್‌ರವರು ಅಧ್ಯಕ್ಷ ಪೀಠದ ಕಡೆಗೆ ಬಂದರು)

(ಗೊಂದಲ)

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಶ್ರೀಮಾನ್ ನಾರಾಯಣಕುಮಾರ್ ಏನು ವಿರೋಧ ಪಕ್ಷದ ನಾಯಕರ ಬಗ್ಗೆ ಹೇಳಿದ್ದಾರೆ ಅದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ಶ್ರೀಮಾನ್ ನಾರಾಯಣಕುಮಾರ್ ಮತ್ತು ಸೂರ್ಯನಾರಾಯಣರಾವ್‌ರವರು ಹೇಳಿದ ಹಾಗೆ ನಾವು ಹಿಂಬಾಳ ಸಂಗೀತವನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ನಾವು ನೇರವಾಗಿ ಸಂಗೀತವನ್ನು ಹೇಳುತ್ತೇವೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ನಾರಾಯಣಕುಮಾರ್‌ರವರು ಮಾತನಾಡಿದ್ದು ಅಷ್ಟು ಯೋಗ್ಯವಾದ ಪದವಲ್ಲ. ಅವರು ಆ ರೀತಿ ಮಾತನಾಡಬಾರದು.

ಅಧ್ಯಕ್ಷರು .—ನೀವು ನಿರ್ವೀಯರೆಂದು ಹೇಳಿದ ಪದವು ಎಷ್ಟು ಯೋಗ್ಯವೋ ಅವರು ಹೇಳಿದ ಪದವು ಕೂಡ ಅಷ್ಟೇ ಯೋಗ್ಯ.

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ ನಾನು ಹೇಳಿದ್ದು ಅವರು ರಾಜಕೀಯ ನಿರ್ವೀರ್ಯರೆಂದು ಮಾತ್ರ ಹೇಳಿದ್ದೇನೆ. ಆದರೆ ಅವರು ದೈಹಿಕ ನಿರ್ವೀಯರೆಂದು ಹೇಳಲಿಲ್ಲ....

(ಗೊಂದಲ)

ಶ್ರೀ ಕೆ.ಎಚ್. ರಂಗನಾಥ್.—ಧರ್ಮಸಿಂಗ್‌ರವರು ಹೇಳಿದ ಮಾತನ್ನು ತಾವು ಕೇಳಿದ್ದೀರಿ.

ಅಧ್ಯಕ್ಷರು.—ಅವರು ಹೇಳಿದ ಮಾತು ಮತ್ತು ನಾರಾಯಣಕುಮಾರ್ ಹೇಳಿದ್ದ ಮಾತು ಕಡತಕ್ಕೆ ಹೋಗಿಲ್ಲ. ಕಡತಕ್ಕೆ ಹೋಗಿದ್ದರೆ ತರಿಸಿ ನೋಡುತ್ತೇನೆ.

ಶ್ರೀ ಕೆ ಹೆಚ್. ರಂಗನಾಥ್.—ನಾವು ಯಾವ ಮಟ್ಟಕ್ಕೆ ಬಂದಿದ್ದೇವೆ ಎಂದು ಹೇಳಿದರೆ ಏನು ಬೇಕಾದರೂ ಹೇಳಿಬಿಟ್ಟು ಸಮರ್ಥನೆ ಮಾಡಿಕೊಳ್ಳುವ ಮಟ್ಟಕ್ಕೆ ಬಂದಿದ್ದೇವೆ.

(ಗೊಂದಲ)

Mr. Speaker.-- May I request the hon. members to resume their seats ?

(Interruptions)

Mr. Speaker.--The whole debate is goingon on a certain presumption........

ಒಬ್ಬ ಮಾನ್ಯ ಸದಸ್ಯರು.—ವಿರೋಧ ಪಕ್ಷದ ಸ್ನೇಹಿತರು ಬಹುಶಃ ನಾರಾಯಣಕುಮಾರ್ ಅವರು ಹೇಳಿದ ಮಾತನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅವಸರದಿಂದ ಮಾತನಾಡುತ್ತಿದ್ದಾರೆ, ನಾರಾಯಣ ಕುಮಾರ್ ಹೇಳಿದ ಮಾತು.

(ಗೊಂದಲ)

* ಅಧ್ಯಕ್ಷರ ಅಪ್ಪಣೆವೆರೆಗೆ ವರದಿಮಾಡಲಿಲ್ಲ

Sri M.S. Krishnan.—I am on a point of order. The House is not in order because one hon. Member is sitting here. I do not know why he should sit here. I request him to get back to his seat so that we can conduct proceedings in a proper manner. Another point of order is Rule 310 says ...

"A Member while speaking shall not

(i) refer to any matters of fact on which a judicial decision is pending ;

(ii) Make a personal charge against a member ;

(iii) offensive expressions about the conduct or proceedings of Parliament or any State Legislature ;

(iv) reflect on any determination of the House except on a motion for rescinding it ;

(v) reflect upon the conduct of person in high authority unless the discussion is based on a substantive motion drawn in proper terms; "

Sri K.H. Ranganath.—If you can kindly ask him, probably he may resume his seat. I request you to ask him. He may not refuse the directions and dis-obey the Chair.

ಅಧ್ಯಕ್ಷರು.—ಶ್ರೀ ಎಂ. ಮಹದೇವ್, ನೀವು ಮಾತನಾಡುವ ಹಾಗಿಲ್ಲ. ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿ ಮಾತನಾಡಿ.

ಶ್ರೀ ಕೆ.ಹೆಚ್. ರಂಗನಾಥ್.—ಮಹದೇವ್ ಅವರು ಏಕೆ ಇಲ್ಲಿ ಬಂದು ಕುಳಿತರೋ ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ನಾನು ನಿಮಗೇನಾದರೂ ಗೊತ್ತಿದೆಯೋ ಎಂದು ತಿಳಿದುಕೊಂಡಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್.—ತಾವು ಅವರಿಗೆ ಸೂಚನೆ ಕೊಡಿ ಕುಳಿತುಕೊಳ್ಳಲಿಕ್ಕೆ.

ಅಧ್ಯಕ್ಷರು.—ಮಹದೇವ್ ಅವರೇ, ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ.

(Hon. Member Sri Mahadev resumed his seat.)

Sri M. S. Krishnan.—Parliamentary Practice & Procedure, by Kaul & Shakdhar mentions (Page 257) I am confining myself to what is happening here. Here it says–

"Members are not allowed to make personal charges against other members.

No member is expected to use offensive expressions about the conduct or proceedings of Parliament or any State Legislature. They are not expected to cast reflections on any decision of the House except on a motion for rescinding such decision.

Mr. Speaker.—On the persumption that some derogatory remarks passed by respective Members have gone on records you are saying this. But those have not gone on record.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ರೆಕಾರ್ಡ್‌ಗೆ ಹೋಗಿಲ್ಲವೆಂದು ತಾವು ಹೇಳಿದ್ದೀರಿ. ಧರ್ಮಸಿಂಗ್‌ರವರು ಮಾತನಾಡಿದ್ದು ಕಡತಕ್ಕೆ ಹೋಗಿಲ್ಲವೆಂದು ತಾವು ಹೇಳಿದ್ದೀರಿ. ಆದರೆ ಎಲ್ಲಾ ಜನರು ಮೇಲ್ಗಡೆ ಕುಳಿತು ಕೇಳುತ್ತಿದ್ದಾರೆ. ತಾವು ಆಗಿರುವುದನ್ನು ಏನು ಮಾಡಬೇಕೆಂದು ಹೇಳಿಲ್ಲ. ಇಲ್ಲದಿದ್ದರೆ ಸದನದ ಘನತೆ ಗೌರವಕ್ಕೆ ಚ್ಯುತಿ ಬರುತ್ತದೆ.

ಅಧ್ಯಕ್ಷರು.—ಇದು ಯಾವುದೂ ಅಚ್ಚಾಗುವುದಿಲ್ಲ; ಅದನ್ನೂ ಕಡತದಿಂದ ತೆಗೆದು ಹಾಕಿದ್ದೇನೆ.

ಶ್ರೀ ಧರ್ಮಸಿಂಗ್.—ಆ ಪದವನ್ನು ನಾನು ಉಪಯೋಗ ಮಾಡಿಲ್ಲ. ಆದರೆ ನಾರಾಯಣ ಕುಮಾರ್ ಅವರು ಏನು ಪದವನ್ನು ಉಪಯೋಗ ಮಾಡಿದ್ದಾರೆ....

ಅಧ್ಯಕ್ಷರು.--ಇದ್ಯಾವುದೂ ಪಬ್ಲಿಷ್ ಮಾಡುವುದಿಲ್ಲವೆಂದು ಹೇಳಿದ್ದೇನಲ್ಲ ?

ಶ್ರೀ ಜೆ.ಡಿ. ಸೋಮಪ್ಪ.--ಈ ಮನೆಯ ಘನತೆ ಗೌರವ ಕಾಪಾಡುವುದು ನಮ್ಮ ಕರ್ತವ್ಯ ಆಗಿದೆ. ಲಕ್ಷಾಂತರ ಜನರಿಂದ ಆರಿಸಿ ಬಂದಿರುವಾಗ ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಈ ರೀತಿ ಮಾತನಾಡುವುದು ಸರಿಯೆ ?

ಅಧ್ಯಕ್ಷರು.--ಇದು ತಮಗೆ ತಿಳಿಯಿತಲ್ಲ ಎಂದು ನನಗೆ ಸಂತೋಷವಾಗಿದೆ!

ಒಬ್ಬರು ಮಾನ್ಯ ಸದಸ್ಯರು.--ಶ್ರೀ ಮಹದೇವ್ ಅವರು ಧರಣಿ ಕುಳಿತುಕೊಳ್ಳುವುದಕ್ಕೆ ಹೋಗಿದ್ದರು. ನಾರಾಯಣಕುಮಾರ್ ಅವರು ಬಂದು ಮಾತನಾಡಿದ್ದಕ್ಕೆ ಅವರು ಧರಣಿ ಕುಳಿತಿದ್ದರು. ಶ್ರೀ ಧರ್ಮಸಿಂಗ್ ಅವರು ತಾವು ಆ ಶಬ್ದವನ್ನು ಉಪಯೋಗ ಮಾಡಿಲ್ಲವೆಂದು ಹೇಳಿದ್ದಾರೆ. ಆದರೆ ನಾರಾಯಣಕುಮಾರ್ ಅವರು ತಾವು ಹಾಗೆ ಮಾತನಾಡಲಿಲ್ಲವೆಂದು ಹೇಳಿಲ್ಲ.

ಅಧ್ಯಕ್ಷರು.—ಯಾವುದೇ ಸದಸ್ಯ before taking exterme step ಸದನದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದಂತಹ ಮಾತು ಕಡತದಲ್ಲೆ ಹೋಗಿಲ್ಲ. ಹಾಗೂ ಆಗ ಈ ಮನೆ ಆರ್ಡರನಲ್ಲಿಲ್ಲದಿರುವುದರ ಪ್ರಯುಕ್ತ ಅದು ಕಡತಕ್ಕೆ ಹೋಗಿಲ್ಲ ಎಂದು ಹೇಳಿದ್ದೇನೆ. ಆದರೂ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಹೀಗೆ ಬಂದು ಧರಣಿ ಕುಳಿತುಕೊಂಡರೆ ಹೇಗೆ ?

ಶ್ರೀ ಎಂ. ಮಹದೇವ್.—ಈ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮುಂದೆ, ನಿಮ್ಮ ಗಮನವನ್ನು ಸೆಳೆಯುವುದಕ್ಕಾಗಿ 5–6 ಸಾರಿ ಪ್ರಯತ್ನಪಟ್ಟೆ. ಆದರೆ ನನ್ನ ಕಡೆಗೆ ತಾವು ಗಮನ ಹರಿಸಲಿಲ್ಲ. ಈ ಕ್ರಮವನ್ನು ತೆಗೆದುಕೊಳ್ಳಬೇಕಾದ ಕಾರಣ ಯಾವುದು ಎಂದರೆ, ಶ್ರೀಮಾನ್ ನಾರಾಯ ಣ್‌ಕುಮಾರ್ ರವರು ಮಾತನಾಡುತ್ತಾ, ಧರ್ಮಸಿಂಗ್‌ರವರನ್ನು ಕುರಿತು, ಏನು ಮಾತನಾಡಿದ್ದಾರೆ ಅದಕ್ಕೆ ವಿರೋಧವನ್ನು ಸೂಚಿಸುವ ಸಲುವಾಗಿ ಈ ಕ್ರಮವನ್ನು ನಾನು ತೆಗೆದುಕೊಳ್ಳಬೇಕಾಯಿತು.

ಶ್ರೀ ಕೆ.ಎಸ್. ಕಾಳಮರಿಗೌಡ.--ಶ್ರೀಮಾನ್ ನಾರಾಯಣಕುಮಾರ್‌ರವರು ಹಿಂದೆಯು ಇದೇ ಇದೇ ರೀತಿ ಮಾತನಾಡಿ ಈಗಾಗಲೇ 2–3 ಸಾರಿ ಕ್ಷಮಾಪಣೆಯನ್ನು ಕೇಳಿದ್ದಾರೆ. ಅವರು, ಈ ರೀತಿಯ ಅಚ್ಚವ್ಯಾ ಶಬ್ದವನ್ನು ಬಳಸುತ್ತಿರುವುದು 10ನೇ ಸಾರಿ ಆಗಿರಬಹುದು, ಇದನ್ನು ಹೀಗೆ ಮುಂದುವರಿಯುವುದಕ್ಕೆ ಬಿಟ್ಟರೆ, ಈ ಸದನದಲ್ಲಿ ಗೌರವವೂ ಉಳಿಯುವುದಿಲ್ಲ. ಘನತೆ ಮೊದಲೇ ಉಳಿಯುವುದಿಲ್ಲ.

ಅಧ್ಯಕ್ಷರು.--ಸಭೆಯ ಗೌರವ ಉಳಿಯಬೇಕೆಂಬುದೇ ನನ್ನದೂ ಕೂಡ ಅಭಿಲಾಶೆಯಾಗಿದೆ. ಮಾನ್ಯ ಸದಸ್ಯರು ಆ ರೀತಿ ಹೇಳಿದ್ದು ಕಡತದಲ್ಲೆ ಹೋಗಿಲ್ಲ ಎಂಬುದಾಗಿ ನಾನು ಹೇಳಿದರೂ ಕೂಡ ಅದನ್ನೇ ತಾವು ಪುನಃ ಹೇಳುತ್ತಾ ಹೋದರೆ ನಾನು ಏನು ಮಾಡಲಿ ?

ಶ್ರೀ ಧರ್ಮಸಿಂಗ್.--ನಾನು ಆ ರೀತಿ ಹೇಳಲಿಲ್ಲ ಅಂತ ಈಗಾಗಲೇ ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರಾದ ಶ್ರೀ ನಾರಾಯಣಕುಮಾರ್‌ರವರೂ ಕೂಡ, ಆ ರೀತಿ ಹೇಳಿದ್ದರ ಬಗ್ಗೆ ತಾವು ಕೇಳಬೇಕಾಗುತ್ತದೆ.

ಅಧ್ಯಕ್ಷರು.--ತಾವು ಕೂಡ ಮತ್ತೆ ಅದೇ ವಿಷಯಕ್ಕೆ ಹೋಗುತ್ತಿದ್ದೀರಿ. We are going beyond. (Interruption)

ಶ್ರೀ ಪಿ. ರಾಮದೇವ್.--ನನ್ನದೊಂದು ಕ್ರಿಯಾಲೋಪ ಇದೆ.

ಶ್ರೀ ಧರ್ಮಸಿಂಗ್.--ಅವರು ಈ ಬಗ್ಗೆ ಏನು ಹೇಳುತ್ತಾರೆಂಬುದನ್ನು ತಾವು ಕೇಳುತ್ತಿಲ್ಲ.

Mr. Speaker.--I am not supposed to ask It has not gone on record.

ಶ್ರೀ ಜೆ.ಡಿ. ಸೋಮಪ್ಪ.--ಈ ಮನೆಯ ಗೌರವವನ್ನು ಉಳಿಸಿಕೊಳ್ಳುವ ರೀತಿಯಲ್ಲಿ ಸದಸ್ಯರು ಮಾತನಾಡಬೇಕು. ಒಂದು ವೇಳೆ ಮಾನ್ಯ ಸದಸ್ಯರು ಆ ರೀತಿ ಹೇಳಲಿಲ್ಲ ಎಂದು ಅವರೇ ಸಭೆಗೆ ಹೇಳಬೇಕಾಗುತ್ತದೆ.

ಶ್ರೀ ಪಿ. ರಾಮದೇವ್,—ನನ್ನ ಕ್ರಿಯಾಲೋಪ ಇಷ್ಟೆ. ತಾವು ಈಗಾಗಲೇ ಇದರ ಬಗ್ಗೆ ತಮ್ಮ ರೂಲಿಂಗ್‌ನ್ನು ಕೊಟ್ಟಿದ್ದೀರಿ. House was not in order. Nothing has gone on record

ಆದರೆ ಮಾನ್ಯ ಸದಸ್ಯರು ಅದನ್ನೇ ಟೀಡಿಯಸ್ ರಿಪಿಟೇಷನ್ ಮಾಡಿಕೊಂಡು ಹೋಗುತ್ತಿದ್ದಾರೆ. ಹೇಗೂ ತಾವು ಇದರ ಬಗ್ಗೆ ರೂಲಿಂಗನ್ನು ಕೊಟ್ಟಿದ್ದಾಗಿದೆ. ಬೇರೆ ವಿಷಯಕ್ಕೆ ಹೋಗಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಅಂತಹ ಒಂದು ಸನ್ನಿವೇಷವನ್ನು ಕ್ರಿಯೇಟ್ ಮಾಡುವುದಕ್ಕೆ ನಮಗೂ ಬರುತ್ತದೆ. ಆ ಒಂದು ಸನ್ನಿವೇಷವನ್ನು ಉಪಯೋಗಿಸಿಕೊಂಡು ಶ್ರೀ ರಾಮದೇವ್‌ರವರನ್ನು ಅನ್ನಬಾರದ್ದನ್ನು ಹೇಳಿಬಿಡೋಣವೆ ? Shall we do that ? Is that the intention of the Hon. Member. Shall I crete now itself. ಸಭೆಯು ಆರ್ಡರ್‌ನಲ್ಲಿ

ಇಲ್ಲದೆ ಇರತಕ್ಕಂತಹ ಸನ್ನಿವೇಷವನ್ನು ಕ್ರಿಯೇಟ್ ಮಾಡಿ, ಹೇಗೂ ಅದು ರೇಕಾರ್ಡಿಗೆ ಹೋಗವುದಿಲ್ಲ ವೆಂದು ತಿಳಿದುಕೊಂಡು ಬಾಯಿಗೆ ಬಂದಹಾಗೆ ಅನ್ನಬಹುದೇ ? ಅದು ಸರಿಹೋಗುತ್ತದೆಯೇ ?

ಶ್ರೀ ಪಿ. ರಾಮದೇವ್.—ಸನ್ಮಾನ್ಯ ಸದಸ್ಯರಾದಂತಹ ರಂಗನಾಥ್‌ರವರು ಮನೆಯ ಹಿರಿಯ ಸದಸ್ಯರು. ಅವರೂ ಹೀಗೆ ಮಾತನಾಡುವುದಾದರೆ ಹೇಗೆ ?

ಶ್ರೀ ಕೆ.ಹೆಚ್. ರಂಗನಾಥ್.—ಏನ್ರಿ ಆಗಿಂದಾಗ್ಗೆ ಹಿರಿಯರು, ಹಿರಿಯರು ಅನ್ನತಕ್ಕಂತಹದ್ದು, ಮಾನ್ಯ ಸದಸ್ಯರಾದ ಶ್ರೀಮಾನ್ ರಾಮದೇವ್‌ರವರಿಗೂ ನನ್ನಷ್ಟೇ ವಯಸ್ಸು ಆಗಿರಬಹುದು.

ಶ್ರೀ ಪಿ. ರಾಮದೇವ್.—ಬಹಳ ನೋವು ಉಂಟಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಈ ಮನೆಯಲ್ಲಿ ಏನು ಮಾಡಬೇಕು. ಯಾವ ಭಾಷೆಯನ್ನು ಬಳಸ ಬೇಕೆಂಬುದನ್ನು ಕಲಿತುಕೊಳ್ಳಬೇಕಾಗುತ್ತದೆ.

ಶ್ರೀ ಪಿ. ರಾಮದೇವ್.—ನಮ್ಮ ಮೇಲೆ ಸಾರಸಗಟಾಗಿ, ನಿಮ್ಮ ಸದಸ್ಯರು ಭ್ರಷ್ಟಾಚಾರಿಗಳು ಎಂಬುದಾಗಿ ಹೇಳಿದ್ದಾರೆ. ಅದರ ಬಗ್ಗೆ ನೀವು ಮಾತನಾಡುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಹೇಗೂ ಅದರ ಮೇಲೆ ಪ್ರಿವಿಲೇಜ್ ಮೋಷನ್‌ನ್ನು ತೆಗೆದು ಕೊಂಡು ಬಂದಿದ್ದೀರಿ. ಅದರ ಮೇಲೆ ಡಿಸ್‌ಕಷನ್ ಮಾಡಿ. ನಾಳೆಯು ಇದೇ ತರಹ ನಡೆದುಕೊಂಡು ಹೋಗಬಹುದು. ನಾನೂ ಕೂಡ ಆ ಸನ್ನಿವೇಷವನ್ನು ಕ್ರಿಯೇಟ್ ಮಾಡಿ, ಉದ್ದೇಶಪೂರ್ವಕವಾಗಿ ಆ ರೀತಿ ಮಾಡುವುದಕ್ಕೆ ಬರುತ್ತದೆ. ರೆಕಾರ್ಡಿಗೆ ಏನೂ ಹೋಗಿಲ್ಲ ಎಂದು ಹೇಳಿ ಯಾವ ಯಾವ ಭಾಷೆ ಯನ್ನು ಬೇಕಾದರೂ ಬಳಸಬಹುದು. Just not I can create a scene so that the House will not be in order. Then Can I language slanguge ನಾನೂ-ಕೂಡ ಅಂತಹ ಒಂದು ಸನ್ನಿವೇಷವನ್ನುಂಟುಮಾಡಿ, ಯಾರಿಗೆ ಏನು ಬೇಕಾದರೂ ಎಂತಹ ಭಾಷೆಯನ್ನು ಬೇಕಾದರೂ ಬಳಸಬಹುದು. ಈ ಮನೆಯ ಸದಸ್ಯರಾದ ಮೇಲೆ ಯಾವ ರೀತಿ ಮಾತ ನಾಡಬೇಕೆಂಬುದನ್ನು ತಾವು ಹೇಳಬೇಕಾಗುತ್ತದೆ. ಮತ್ತೆ ಮಾನ್ಯ ಸದಸ್ಯರಾದಂತಹ ಶ್ರೀ ರಾಮದೇವ್ ರವರು ನನ್ನನ್ನು ಹಿರಿಯ ಸದಸ್ಯರು ಎಂದು ಹೇಳುತ್ತಿದ್ದಾರೆ. ಅವರು ವಯಸ್ಸಿನಲ್ಲಿ ನನ್ನಷ್ಟೆ ಆಗಿರ ಬಹುದು. ಅಥವಾ ನನಗಿಂತ ಕಡಿಮೆ ವಯಸ್ಸು ಆಗಿದೆಯೋ ಎಂಬುದು ನನಗೆ ಗೊತ್ತಿಲ್ಲ. ತಾವು ಕೊಟ್ಟಂತಹ ರೂಲಿಂಗ್ ಬಗ್ಗೆ ನಾವು ಮಾತನಾಡುತ್ತಿಲ್ಲ.

ಶ್ರೀ ಪಿ. ರಾಮದೇವ್.—ತಾವೂ ಕೂಡ ಸ್ಪೀಕರ್ ಆಗಿದ್ದಂತಹವರು. ಅವರ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಇಂತಹ ಸನ್ನಿವೇಶವನ್ನು ಕ್ರಿಯೇಟ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎಂದು ಹೇಳುವುದು ಸರಿಯೇ ?

ಶ್ರೀ ಕೆ.ಹೆಚ್. ರಂಗನಾಥ್.—ನಾನು ಹೇಳಿದ್ದಂತಹ ಕನ್ನಡ ಮಾನ್ಯ ಸದಸ್ಯರಿಗೆ ಅರ್ಥವಾಗಿ ದೆಯೋ ಅಥವಾ ಇಲ್ಲವೋ ಗೊತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಸದಸ್ಯರಾದಂತಹ ಶ್ರೀ ನಾರಾಯಣಕುಮಾರ್‌ರವರು ಹೇಳಿದ್ದು ಕಡತದಲ್ಲಿದ್ದರೆ ಅದನ್ನು ತೆಗೆಸಿ ಹಾಕಿ. ಇಲ್ಲದಿದ್ದರೆ ಶ್ರೀಮಾನ್ ಧರ್ಮಸಿಂಗ್‌ರವರು ಏನು ಹೇಳಿದರು ಅದಕ್ಕೆ ಡಾಕ್ಟರ್ ಹತ್ತಿರ ಕಳುಹಿಸಿ ಪರೀಕ್ಷೆ ಮಾಡಿಸಿ.

ಶ್ರೀ ಮುತ್ತಿನಪೆಂಡಿಮಠ್.—ಮಾನ್ಯ ಸದಸ್ಯರಾದಂತಹ ಶ್ರೀ ಧರ್ಮಸಿಂಗ್‌ರವರು ಆ ಪದವನ್ನು ಉಪಯೋಗ ಮಾಡಿಲ್ಲ ಎಂದು ಹೇಳಿದರು. ಅದೇ ರೀತಿ ಶ್ರೀ ನಾರಾಯಣಕುಮಾರ್‌ರವರು ಹೇಳ ಬೇಕಾಗುತ್ತದೆ.

ಅಧ್ಯಕ್ಷರು.—ಯಾವುದು ರೆಕಾರ್ಡಿಗೆ ಹೋಗಿಲ್ಲವೋ ಅದರ ಬಗ್ಗೆ ಈ ರೀತಿ ಮಾತನಾಡುತ್ತಾ ಹೋದರೆ ಹೇಗೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ಸದಸ್ಯರಾಗಿರತಕ್ಕಂತಹ ಶ್ರೀಮಾನ್ ಧರ್ಮಸಿಂಗ್‌ರವರ ಮೇಲೆ ಸದಸ್ಯರಾಗಿರುವಂತಹ ಶ್ರೀ ನಾರಾಯಣಕುಮಾರ್‌ರವರು ಏನೊಂದು ಉಚ್ಚಾರಣೆ ಮಾಡಿದ್ದಾರೆ ಅದು ಕಡತದಲ್ಲಿಲ್ಲ ಎಂದು ತಾವು ಹೇಳಿದ್ದೀರಿ. You are not exausting all the documents. You will have to come to the rescue of the members. ಇದು ಸದಸ್ಯರ ರಕ್ಷಣೆಯ ಪ್ರಶ್ನೆ. ಸದಸ್ಯರ ರಕ್ಷಣೆ ಪ್ರಶ್ನೆ ಬಂದಾಗ ಕಡತ ನೋಡುತ್ತಾ ಕುಳಿತುಕೊಂಡರೆ ಆಗುವುದಿಲ್ಲ. ಸದಸ್ಯರ ಹಕ್ಕಿನ ಪ್ರಶ್ನೆ ಬಂದಾಗ ಕಡತದ ಮುಂದೆ ಹೋಗಿ ನೋಡಬೇಕಾಗುತ್ತದೆ. ತಾವು ಬರೀ ಕಡತದ ಆಧಾರದ ಮೇಲೆ ಎಲ್ಲಾ ವಿಚಾರವನ್ನು ವಿಚಾರ ಮಾಡುವುದಾದರೆ ....

ಅಧ್ಯಕ್ಷರು.—ಹೊಸ ವಿಚಾರವನ್ನು ತಾವು ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಸದಸ್ಯರಾದಂತಹ ಧರ್ಮಸಿಂಗ್‌ರವರು ಆ ರೀತಿ ಹೇಳ

ಲಿಲ್ಲ ಎಂದು ಹೇಳಬೇಕಾಗುತ್ತದೆ. ಇಲ್ಲ, ಅವರು ಸಭೆಯಲ್ಲಿ ಕ್ಷಮಾಪಣೆಯನ್ನು ಕೇಳಬೇಕಾಗುತ್ತದೆ. ಈ ಸದನದ ಸದಸ್ಯರ ರಕ್ಷಣೆಯ ಪ್ರಶ್ನೆ ಬರುವಾಗ, ತಾವು ಮೂಕ ಪ್ರೇಕ್ಷಕರಾಗಿರಬಾರದು. ತಾವು ದಯಮಾಡಿ ನಮ್ಮ ರಕ್ಷಣೆಗೆ ಬನ್ನಿ.

ಶ್ರೀ ಎಂ. ರಘುಪತಿ.—ಈ ಸದನದಲ್ಲಿ ಯಾವುದೇ ಒಂದು ವಿಷಯದ ಮೇಲೆ ಚರ್ಚೆ ನಡೆಯು ವಂತಹ ಸಂದರ್ಭದಲ್ಲಿ ಸದಸ್ಯರು ಮಾತನಾಡುವಂತಹ ಪದ ಬಳಕೆಯಿಂದ ಘರ್ಷಣೆಗೆ ಕಾರಣವಾಗುತ್ತದೆ. ವಿಧಾನ ಸಭೆಯ ಕಾರ್ಯಕಲಾಪಗಳು ನಡೆಯುವಾಗ ಈ ಕಡೆಯ ಸದಸ್ಯರಿಂದಾಗಲಿ ಆ ಕಡೆಯ ಸದಸ್ಯ ರಿಂದಾಗಲಿ ಬಿರುಸು ಮಾತು ನಡೆಯುವುದು ಸಹಜ. ಆ ಬಿರುಸಿನ ವಾತಾವರಣ ತಿಳಿಯಾಗಬೇಕಾದರೆ ಕೆಲವು ಹಾಸ್ಯ ಚಟಾಕಿಗಳನ್ನು ಹಾರಿಸುವುದೂ ಸಹಜ. ಈ ಸಂದರ್ಭದಲ್ಲಿ ಇಷ್ಟೇ ನಾನು ಪ್ರಾರ್ಥನೆ ಮಾಡಿಕೊಳ್ಳುವುದು, ನಾನು ಈ ರೀತಿ ಹೇಳಿದ ಮಾತ್ರಕ್ಕೆ ಆ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೇ ನೆಂದು ಭಾವಿಸಬಾರದು. ಈ ಸದನದ ಗೌರವವನ್ನು ಕಾಪಾಡುವುದಕ್ಕೆ ಎರಡು ಕಡೆಯ ಸದಸ್ಯರೂ ಕೂಡ ಆಸಕ್ತರಾಗಿದ್ದಾರೆ. ಶ್ರೀಮಾನ್ ನಾರಾಯಣಕುಮಾರ್‌ರವರು ಆ ಪದವನ್ನು ಬಳಸಿದ್ದಾರೋ ಅಥವಾ ಇಲ್ಲವೋ ಎಂಬುದು ಇಲ್ಲಿಗೆ ಕೇಳಿಸಲಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ಇಷ್ಟು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಜಿ. ನಾರಾಯಣಕುಮಾರ್‌ರವರು ಬಳಸಿದ ಪದಗಳ ಬಗ್ಗೆ ಇಲ್ಲಿ ಏನು ಚರ್ಚೆಯಾಗುತ್ತಾ ಇದೆ ಅದರ ಬಗ್ಗೆ ನಾನು ಎರಡೇ ವಾಕ್ಯದಲ್ಲಿ ಹೇಳುತ್ತೇನೆ. ಅದೇನೆಂದರೆ ಅವರೇ ನಾದರೂ ಈ ಪದ ಬಸಳದೆ ಇದ್ದರೆ ಇಲ್ಲ ಎಂದು ಹೇಳಲಿ, ಆ ಪದವನ್ನು ಬಳಸಿದ್ದರೆ ಅದಕ್ಕೆ ವಿವರಣೆ ಯನ್ನು ಕೊಟ್ಟರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ.

1-30 p.m.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ಅವರಿಗೆ ಹೇಗೆ ಆತ್ಮಗೌರವ ಇದೆಯೋ ಹಾಗೆಯೇ ನಮಗೂ ಕೂಡ ಆತ್ಮ ಗೌರವ ಇದೆ. ಜನತಾಪಕ್ಷದ ಶಾಸಕರು ಲಂಚಕೋರರು, ವರ್ಗಾ ವರ್ಗಿಗೆ ಹಣ ತೆಗೆದು ಕೊಂಡಿದ್ದಾರೆ ಎಂದು ಹೇಳಿ ಏನೇನು ವದರಾಡಿದರು ಅದಕ್ಕೆ ನಾವು ವದರಾಡಿ ದ್ದೇವೆ. ನಾನೂ ಸಹ ಪೇಟೆಯಲ್ಲಿ ಹುಟ್ಟಿದವ. ನನಗೂ ಸಹ ಹೇಗೆ ಮಾತನಾಡಬೇಕು. ಅನ್ನುವುದೂ ಗೊತ್ತಿದೆ. ಎರಡನೆಯದಾಗಿ, ಮಾನ್ಯ ವಿರೋಧ ಪಕ್ಷದ ನಾಯಕರಾದ ವೀರಪ್ಪಮೊಯ್ಲಿ ಅವರು ನಮ್ಮ ನಿರ್ವೀರ್ಯರು ಎನ್ನುವ ಮಾತು ಏನು ಹೇಳಿದ್ದಾರೆ ಆ ತರಹ ಮಹತ್ತರವಾದ ಅಪಾದನೆ ಗುರುತರ ವಾದ ಆಪಾದನೆ ಮಾಡಿದ್ದಾರೆ ಇದು ಸರಿಯೇ ?

(ಗೊಂದಲ)

ಅಧ್ಯಕ್ಷರು.—ತಾವು ವಿಷಯಕ್ಕೆ ಬನ್ನಿ. ತಾವು ಏನು ಹೇಳಿದ್ದೀರಿ ಅದನ್ನು ಹೇಳಿ.

ಶ್ರೀ ಜಿ. ನಾರಾಯಣಕುಮಾರ್.—ಅವರು ಕುಡಿದು ಬಂದ ಹಾಗೆ ಇದ್ದರು ಎಂದು ಹೇಳಿದನೆ ವಿನಹ ಕುಡಿದು ಬಂದಿದ್ದಾರೆ ಎಂದು ಹೇಳಲಿಲ್ಲಾ.

(ಗೊಂದಲ)

ಅಧ್ಯಕ್ಷರು.—ನಾನು ಎರಡೂ ಕಡೆಯಲ್ಲಿ ಸದಸ್ಯರಲ್ಲೂ ಒಂದು ವಿಚಾರವನ್ನು ಮನವಿ ಮಾಡಿ ಕೊಳ್ಳುತ್ತೇನೆ. ಅದೇನೆಂದರೆ ನಾನು ಈ ಶಾಸನ ಸಭೆಗೆ ಬರುವ ಮೊದಲು ಲೋಕಸಭೆಯಲ್ಲಿ ಕೆಲಸ ಮಾಡತಕ್ಕಂಥಾ ಅವಕಾಶ ಸಿಕ್ಕಿತ್ತು. ನಮ್ಮ ರಾಷ್ಟ್ರದ ಕೇಂದ್ರವಾದ ಲೋಕಸಭೆಯಲ್ಲಿ, ಕೆಲಸ ಮಾಡುತ್ತಾ ಇರತಕ್ಕಂಥ ಸಮಯದಲ್ಲಿ ನನಗೆ ಅನುಭವ ಇರುವ ಹಾಗೆ ಕರ್ನಾಟಕ ರಾಜ್ಯ ಶಾಸನಸಭೆ ಎಂದರೆ ಬಹಳ ಅತ್ಯಂತ ಗೌರವವನ್ನು ಇಟ್ಟಿದ್ದರು. ರಾಷ್ಟ್ರದಲ್ಲೇ ಈ ಶಾಸನಸಭೆಗೆ ಗೌರವ ಇತ್ತು. ಈ ಶಾಸನ ಸಭೆಗೆ ಶತಮಾನಗಳಿಂದಲೂ ಬಹಳ ಮೆಚ್ಚುಗೆಯನ್ನು ಪಡೆದುಕೊಂಡು ಬಂದಿದೆ. ಆಗಿನ ಸದಸ್ಯರು ಈಗ ಇಲ್ಲದೇ ಇರಬಹುದು, ಆದರೆ ಅವರು ಬಿಟ್ಟುಹೋಗಿರುವ ಪರಂಪರೆಗಳನ್ನು ನಾವೆಲ್ಲರೂ ಸೇರಿ ಕಾಪಾಡ ಬೇಕು. ಈ ದಿಶೆಯಲ್ಲಿ ತಾವೆಲ್ಲಾ ಸಹಕರಿಸಬೇಕು ಎಂದು ಹೇಳಿ, ಈಗ ಮಾನ್ಯ ಜಿ. ನಾರಾಯಣ ಕುಮಾರ್‌ರವರು ಹೇಳಿದಂತಾ ಸ್ಪಷ್ಟೀಕರಣವನ್ನು ಇಲ್ಲಿಗೇ ಮುಗಿಸಿ ನಾವು ಮುಂದಿನ ಕಾರ್ಯಕಲಾಪಗಳಿಗೆ ಹೋಗೋಣ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಹೇಳಿದಂಥಾ ಮಾತುಗಳು ಬಹಳ ಮೌಲ್ಯ ಉಳ್ಳದ್ದು, ಈ ಸದನದ ಪರಂಪರೆಯನ್ನೂ, ಕೀರ್ತಿಯನ್ನೂ, ಸಂಸ್ಕೃತಿಯನ್ನೂ ಉಳಿಸಿಕೊಂಡು ಹೋಗುವುದಕ್ಕೆ ನಾವೆಲ್ಲಾ ಸಹಕಾರ ಮಾಡುವುದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ. ಇಂಥ ಒಂದು ಅವಕಾಶ ಮುಂದೂ ಕೂಡ ನಡೆಸಿಕೊಂಡು ಹೋಗಬೇಕು ಎಂದು ನಾನು ಎಲ್ಲಾ ಸದಸ್ಯರನ್ನೂ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ರಾಜಕೀಯವಾಗಿ ವಿಶ್ಲೇಷಣೆ ಮಾಡುವ ಕಡೆಗೆ, ರಾಜಕೀಯವಾಗಿ ಆಪಾದನೆ ಮಾಡುವ ಕಡೆಗೆ, ರಾಜಕೀಯವಾಗಿ ಎದುರಿಸತಕ್ಕಂಥ ಕಡೆಗೆ ಎರಡೂ ಪಕ್ಷದವರು ಮಾಡಿ ದಾಗ ತಮಗಿರುವ ಸ್ವಾತಂತ್ರ್ಯದ ಹಕ್ಕಿನ ಚ್ಯುತಿ ಪ್ರಶ್ನೆ ಬರುತ್ತದೆ. ಇಲ್ಲದೇ ಹೋದರೆ ಅದು ಉದ್ಭವ ವಾಗುವುದಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಇದನ್ನು ರಾಜಕೀಯವಾಗಿ

ಎದುರಿಸುವುದನ್ನು ಬಿಡಬೇಕು ಯಾವುದೇ ಒಬ್ಬ ಸದಸ್ಯರ ಮೇಲೆ ಏನಾದರೂ ಆಪಾದನೆ ಮಾಡಿದರೆ, ಅವನ ಮೇಲೆ ಧಾಳಿ ಮಾಡುವುದಕ್ಕೆ ಹೋದರೆ ಅಂತಹ ಸಂದರ್ಭದಲ್ಲಿ ಈ ಸದನದಲ್ಲಿ ನಿಷ್ಪಕ್ಷಪಾತವಾಗಿ ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ಆ ಸಂದರ್ಭದಲ್ಲಿ ತಮ್ಮ ಸಹಾಯನ್ನು ಕೇಳುವುದಕ್ಕೆ ಇಷ್ಟಪಡುತ್ತೇವೆ. ಮತ್ತು ಅವರಿಗೆ ರಕ್ಷಣೆ ಈ ಶಾಸನದ ಮೂಲಕವೇ ಆಗಬೇಕಾಗಿಲ್ಲ. ಸಂವಿಧಾನದ ಆರ್ಟಿಕಲ್ ಅನ್ನು ಹಿಡಿದುಕೊಂಡು ರಕ್ಷಣೆ ಮಾಡತಕ್ಕಂಥ ಸಂದರ್ಭ ಈ ಸದನದಲ್ಲಿ ಇನ್ನೂ ಬಂದಿಲ್ಲ. ಅಲ್ಲದೆ ಈ ಸಂವಿಧಾನದ ಹಿನ್ನೆಲೆಯಲ್ಲಿ ಇಮ್ಯೂನಿಟಿ ಯಾವುದು ಇದೆ ಅದನ್ನು ಕೋಟ್ ಮಾಡುವ ಪ್ರಸಂಗ ಇನ್ನೂ ಬಂದಿಲ್ಲ. ಈಗ ಬಂದಿದೆ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಸಂವಿಧಾನದಲ್ಲಿರುವ ಒಂದು ವಿಷಯವನ್ನು ತರಬಯಸುತ್ತೇನೆ. ಅದೇನೆಂದರೆ

'But, it cannot be contended that in order to be protected under clause 2, the offending works must have relevance to the business of the House or Parliament or the State Legislature as the case may be, once it is proved that Parliament was sitting and its business was being transacted anything said during the course of the business is immuned from the proceedings in any court.

ಹೀಗೆ ಇದರ ಬಗ್ಗೆ ಯಾವುದೇ ಒಂದು ಕಾನೂನನ್ನು ತಿಳಿಸದೇ ಅವನಿಗೆ ಶಿಕ್ಷೆ ಆಗಿಲ್ಲ. ಇದನ್ನು ಸೆನ್ಸಾರ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ರೀತಿಯಾಗಿ ಯಾವುದೇ ಒಂದು ಕಾರ್ಯಕ್ರಮವನ್ನು ಸದಸ್ಯರ ಮೇಲೆ ತೆಗೆದುಕೊಳ್ಳತಕ್ಕಂಥಾದ್ದು ಉದ್ಭವಿಸುವುದಿಲ್ಲ. ಮಾನ್ಯ ಅಧ್ಯಕ್ಷರು ಕೆಲವು ನಡವಳಿಕೆಗಳ ಬಗ್ಗೆ ಹೇಳಿದರು. ಅದು ಅನಿವಾರ್ಯ ರಾಮದೇವ್‌ರವರು ಪ್ರಿವಿಲೇಜ್ ಮೋಷನ್ ಏನು ಇದೆ ಅದು ಪ್ರೆಸಿಂಪ್‌ಷನ್ ಮೇಲೆ ಇದೆ ಅದರ ಮೇಲೆ ಜನರಲ್ ಆಗಿ ಪ್ರಿಸಿಡೆಂಟ್ಸ್ ಕೋಟ್ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರು ಪ್ರೊಸೀಡಿಂಗ್ಸ್‌ನಲ್ಲಿ ಇದು ಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ, ನಾನು ಮಾರ್ಮಿಕವಾಗಿ ಹೇಳಿದೆ. ಅಷ್ಟೆ. ಆದುದರಿಂದ ಈ ಪ್ರಿವಿಲೇಜ್ ಮೋಷನ್‌ನಲ್ಲಿ ಯಾವುದೇ ಸತ್ವ ಇಲ್ಲ, ಈ ಪ್ರಿವಿಲೇಜ್ ಮೋಷನ್ ಅನ್ನು ಹಿಂತೆಗೆದುಕೊಳ್ಳಬೇಕು, ಅಂತಹ ಪ್ರಸಂಗ ಏನು ನಡೆದಿಲ್ಲ. ಈ ಸದನದಲ್ಲಿ ಈ ಪ್ರಿವಿಲೇಜ್ ಮೋಷನ್ ಬಗ್ಗೆ ಚರ್ಚೆಮಾಡುವುದಕ್ಕೆ ಇದು ಆ ಕಕ್ಷೆಯಲ್ಲಿ ಬರುವುದಿಲ್ಲ. ಇದರಲ್ಲಿ ಯಾವುದೇ ಇಮ್ಯೂನಿಟಿ ಇಲ್ಲ. ಆದುದರಿಂದ ಇದು ಹಕ್ಕುಚ್ಯುತಿ ಪ್ರಶ್ನೆಗೆ ಬರುವುದಿಲ್ಲ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

Mr. Speaker.—Before we proceed on this I would like to put the records straight. ಮೊನ್ನೆ ಈ ಬಗ್ಗೆ ನಡೆದ ವಾಗ್ವಾದದಲ್ಲಿ ಕೆಲವು ಅಂಶಗಳು ಎಡೆಗೊಟ್ಟಿದೆ. ಈ ದಿವಸ ನಾನು ಅದರ ಬಗ್ಗೆ ಕಡಿತ ತರಿಸಿ ನೋಡುತ್ತೇನೆಂದು ನಾನು ನಿನ್ನೆ ದಿವಸ ಹೇಳಿದೆ. ಆದರೆ ಹೇಳಬೇಕಾದಂಥಾ ಯಾವುದೇ ಮಾತು ಆ ದಿವಸದ ಕಡತದಲ್ಲಿ ಕಾಣದೇ ಇದ್ದ ಕಾರಣ ಅದನ್ನು ಸ್ಪಷ್ಟಪಡಿಸುವುದಕ್ಕೆ ಪ್ರಯತ್ನ ಮಾಡಲಿಲ್ಲಾ ಎಂದು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಅದಾದಮೇಲೆ ಪುನಃ ನಮ್ಮಲ್ಲಿರತಕ್ಕ ಟೇಪ್ ಕೂಡ ತರಿಸಿ ನೋಡಿದ್ದೇನೆ. ಇದರಲ್ಲಿ ಒಂದುಮಾತು ಬಂದಿದೆ ಅದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. 'ಪ್ರತಿಯೊಬ್ಬ ಜನತಾ ಪಕ್ಷದ ಶಾಸಕರಿಗೆ ಬೇಕಾದಂತ ಅಸಿಸ್ಟಂಟ್ ಎಕ್ಸಿಕುಟೀವ್ ಇಂಜಿನಿಯರ್ ಬೇಕು, ಎಕ್ಸಿಕ್ಯುಟೀವ್ ಇಂಜಿನಿಯರ್ ಬೇಕು. ಇದನ್ನು ಯಾವ ಉದ್ದೇಶದಿಂದ ಕೊಟ್ಟಿದ್ದಾರೆ ಇದಕ್ಕೆ ಕಾರಣ ಏನು ದುಡ್ಡು ಮಾಡಿಕೊಟ್ಟು ಕೊಟ್ಟಿದ್ದಾರೆ. ಟ್ರಾನ್ಸ್‌ಫರ್ಸ್‌ನಲ್ಲಿ ಎಷ್ಟು ಬಂಗ್ಲಿಂಗ್ ಆಗಿದೆ,' ಇಷ್ಟು ವಿಷಯ ಹೋಗಿದೆ. ನಿನ್ನೆಯದಿವಸ ತಾವು ಇದನ್ನು ಕೇಳಿದಾಗ ಬಂದಿರಲಿಲ್ಲ. ಅದಾದಮೇಲೆ ನಾನು ಸಾಯಂಕಾಲ ಟೇಪ್ ತರಿಸಿ ನೋಡಿದೆ. ನಮ್ಮ ರಿಕಾರ್ಡಿಂಗ್ ಮಿಸ್ಟೇಕ್ ಆಗಿರಬಹುದು. ನಿನ್ನೆದಿವಸ ನನಗೆ ತಕ್ಷಣ ಹೇಳಲಿಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ವಿವರಣೆ ಕೊಟ್ಟಮೇಲೆ ಪರಿಸ್ಥಿತಿಗೆ ಸಹಾಯಕವಾಯಿತು. ಪತ್ರಿಕೆಯಲ್ಲಿ ಬೇರೆ ರೀತಿಯಲ್ಲಿ ವರದಿ ಬಂದಿದೆ. ಜನತಾ ಶಾಸಕರು ವರ್ಗಾವರ್ಗಿಯಲ್ಲಿ ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎನ್ನುವ ಅಭಿಪ್ರಾಯದಲ್ಲಿ ಹೇಳಿದ್ದಾರೆಂದು ಅಲ್ಲಿ ವರದಿಯಾಗಿದೆ. ಅವರು ಭ್ರಷ್ಟಾಚಾರ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಇಲ್ಲಿರುವ ಪ್ರಶ್ನೆ ಲಿಮಿಟೆಡ್. ಪ್ರಿವಿಲೇಜ್ ಇಲ್ಲಿ ಬರುತ್ತದೆಯೋ ಇಲ್ಲವೋ ? ಮಾನ್ಯ ವಿರೋಧಪಕ್ಷದ ನಾಯಕರು ದೀರ್ಘವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಈ ವಿಷಯವನ್ನು ಎರಡು ರೀತಿಯಲ್ಲಿ ನೋಡುತ್ತೇನೆ. ಸದಸ್ಯರು ಸದನದಲ್ಲಿ ಮಾತನಾಡುವುದು, ಸದನದ ಹೊರಗಡೆ ಮಾತನಾಡುವುದು, ಪತ್ರಿಕೆಗಳು ಟೀಕೆ ಮಾಡುವುದು ಇವೆಲ್ಲವೂ ಸಹ ಪ್ರಿವಿಲೇಜ್ ಮೋಷನ್‌ನ ಕಕ್ಷೆ

ಯಲಿಲ್ಲ ಬರುತ್ತವೆಯೋ ಎನ್ನುವುದು ಪ್ರಶ್ನೆ ಒಬ್ಬ ಸದಸ್ಯರು ಈರೀತಿಯಾಗಿ ಹೇಳಿದ್ದಾರೆ, ಸದನದಲ್ಲಿ ಈ ರೀತಿಯ ಅಭಿಪ್ರಾಯ ಬಂದಿದೆ. ಅವರು ಹೇಳಿದ್ದರೆ ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆಯೇ ಅವರಿಗೆ ಇದನ್ನು ಹೇಳುವುದಕ್ಕೆ ಹಕ್ಕು ಇಲ್ಲವೇ ? ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಇಲ್ಲಿಯಾಗಲೀ ಪಾರ್ಲಿಮೆಂಟ್‌ನಲ್ಲಾಗಲೀ ಮೇಯರ್ಸ್ ಪಾರ್ಲಿಮೆಂಟ್ ಪುಸ್ತಕವನ್ನು ನೋಡಿದಾಗ ಸದಸ್ಯರಿಗೆ ಈರೀತಿ ಹೇಳುವುದಕ್ಕೆ ಹಕ್ಕು ಇದೆ; ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತ ಮಾಡಿದ್ದಾರೆ. ಸರ್ಕಾರ ಸರಿಯಾಗಿ ನಡೆಯುತ್ತಿಲ್ಲ, ಭ್ರಷ್ಟಾಚಾರದ ಸರ್ಕಾರ ಎಂದು ಹೇಳುವುದಕ್ಕೆ ಹಕ್ಕು ಇದೆ. ಭ್ರಷ್ಟಾಚಾರದ ಪಕ್ಷದ ಸರ್ಕಾರ ಎಂದು ಹೇಳಿದ ತಕ್ಷಣ ಅದು ನಮಗೆ ಚುಚ್ಚಿದಂತಾಗಿದೆ ಅದನ್ನು ಹೇಳುವುದಕ್ಕೆ ಹಕ್ಕು ಇಲ್ಲ ಎಂದು ಹೇಳುವುದಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು, ಅವರು ಖಂಡಿತವಾಗಿಯೂ ಉತ್ತರ ಕೊಡಬೇಕಾಗಿತ್ತು. ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಪಾರ್ಲಿಮೆಂಟ್‌ನ ಪ್ರಾಕ್ಟೀಸ್‌ನಲ್ಲಿ ನಾವು ಇದನ್ನು ನೋಡಿದರೆ ಇದು ಪ್ರಿವಿಲೇಜ್ ಮೋಷನ್ ಆಗುವುದಿಲ್ಲ. ಏಕೆಂದರೆ,

> 'Speech and action in Parliament may be said to be unquestioned and free. However, this freedom from external influence or interfence does not involve any unrestrained licence of speech within the walls of the House.......

Here may right is unquestioned and free. At the same time this freedom from external influence or interfence does the second question is, not involve unrestrained licence of speech within the walls of the House.

ಇಂಥಾದ್ದನ್ನು ಮಾತನಾಡುವುದಕ್ಕೆ ಹಕ್ಕು ಇದೆ. My submission here is,

ಅವರು ಸ್ಪಷ್ಟವಾಗಿ ಒಬ್ಬ ಮಾನ್ಯ ಸದಸ್ಯರನ್ನು ಕುರಿತು ಈ ರೀತಿಯಾಗಿ ಮಾಡಿದ್ದಾರೆ ಎಂದು ಅವಾಚ್ಯ ಶಬ್ಧಗಳನ್ನು ಉಪಯೋಗಿಸಿದ್ದರೆ that should have been unrestrained licence within the walls of the House-

ಅದೂ ಕೂಡ ನನಗೆ ತಿಳಿದ ಮಟ್ಟಿಗೆ ಇಲ್ಲಿ ಅಟ್ರಾಕ್ಟ್ ಆಗುವುದಿಲ್ಲ. Let them not think that I am trying to defend the Members.

ಇಷ್ಟುಮಾತ್ರವಲ್ಲ, ಇನ್ನು ಮುಂದಕ್ಕೆ ಏನು ಹೇಳುತ್ತಾರೆಂದರೆ 'The right to freedom of speech in the House is circumscribed by constitutional provisions and the Rules which also guard against making of unwarranted allegations against....... ಇದನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅದನ್ನು ನಾನು ಇಲ್ಲಿ ಮತ್ತೆ ಹೇಳಲಿಕ್ಕೆ ಹೋಗುವುದಿಲ್ಲ. ಅದರ ಪ್ರಕಾರ' For his speech and action in Parliament a Member is subject only to the discipline of the House itself and no proceedings, civil or criminal, can be instituted against him in any court in respect of the same....' If a Member of Parliament has said something which is derogatory, which is defamatory than he is liable to be punished by the House. Nobody can raise it as a matter of privilege. That is the position. Supposing hon. Member Sri Vodeyaraj said that all Janata party Members are corrupt. ಎಂದು ಇಟ್ಟುಕೊಳ್ಳಿ, So, it is the right of privilege of that Member to say what he has said is wrong. ಸದಸ್ಯರಿಗೆ ಇದನ್ನು ಹೇಳುವುದಕ್ಕೆ ಅಧಿಕಾರ ಇದೆ, Then, one more point I would like to add is that even something which is said outside the parliament, outside the House even that has not been considered as defamatory. Mr. Spaker, Sir, you must be knowing the decision given by late Sri Ananathashyana Iyengar--when he was Speaker a decision was given on this point. I would like to bring to the notice of the House the rulings cited in page 224 of the Practice and procedure of Parliament. It says ;

'On a similar consideration, defamatory words against a particular section of the House or against a particular party the House are not treated as constituting a contempt of the House, since the whole House is not affected. Thus, in a case in Lok Sabha where one political leader was reported in a newsparper to have said in public speech that the representatives of a political party in the legislatures were "people whom any first class magistrate would round up" and were "men without any appreciable means of livelihood".

ಕೇರ್ ಆಫ್ ಫುಟ್‌ಪಾತ್ ಜನ ಎಂದು ಬೈದರು. Speaker Ayyanagar disallowed the question of privilege. That has been the decision.

Then again it is said ; 'Similarly, the House may not necessarily take serious notice of defamatory statements made by irresponsible persons. The Speaker has to decide that. In deciding such cases of libel, it is recognised that the extent and circumstances of the publication of a liellous statements as also the standing of the person making such a statement should be taken into account in considering whether privilege should be asserted in a particular case. ಅವರು ಹೇಳುವುದು ಪ್ರೂವ್ ಆದರೆ ಅವರಿಗೆ ಪನಿಷ್‌ಮೆಂಟ್ ಕೊಡಲಿ ಬೇಡ ಎಂದು ಹೇಳುವುದಿಲ್ಲ. ಆದರೆ ಸುಮ್ಮನೆ ಹೇಳಬೇಕಾಗಿದೆ ಎಂದರೆ ಅದು ನ್ಯಾಯವಾಗುವುದಿಲ್ಲ ಸಮಂಜಸವಾಗುವುದಿಲ್ಲ.

ಶ್ರೀ ಪಿ. ರಾಮಚಂದ್ರರಾವ್.—ಪ್ರಿವಿಲೇಜ್ ಪದವನ್ನು ನಾವು ಬಹಳ ಬ್ರಾಡ್ ಆಗಿ ವಿಶಾಲವಾಗಿ ತೆಗೆದುಕೊಳ್ಳಬೇಕು. ಇದಕ್ಕೆ ನ್ಯಾರೋ ಔಟಲುಕ್‌ನಿಂದ ಇಂಟರ್‌ಪ್ರಿಟೇಷನ್ ಕೊಡುವುದು ಸರಿಯಲ್ಲ. ಆದ್ದರಿಂದ ಇಲ್ಲಿ ರಾಜಕೀಯ ಪಕ್ಷಗಳಲ್ಲಿ ಕುಳಿತು 20-30 ವರ್ಷದಿಂದ ರಾಜಕೀಯದಲ್ಲಿರುವವರು ಸ್ವಲ್ಪ ಥಿಕ್ ಸ್ಕಿನ್‌ನವರು ಆಗಿರಬೇಕು. ಸದನದಲ್ಲಿ ಮಾತನಾಡವಾಗ ಟಚಿ ಆಗಿರಬಾರದು. ಕೆಲವು ಶಬ್ದ ಬಂದಕೂಡಲೇ ಉದಾಹರಣೆಗೆ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆಂದು ಹೇಳಿ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಹೀಗಿರುವಾಗ ಭ್ರಷ್ಟಾಚಾರದ ಬಗ್ಗೆ ಸ್ವಲ್ಪ ಚರ್ಚೆಯಲ್ಲಿ ಅಂಶಗಳು ಬಂದಿದ್ದರೆ ಅದನ್ನು ಸಹಿಸದೆ ಅದಕ್ಕೆ ಸರಿಯಾಗಿ ಪ್ರಿವಿಲೇಜ್‌ಮೋಷನ್ ತರುವುದು ಬಹಳ ಆಶ್ಚರ್ಯ. ಆದ್ದರಿಂದ ಇದನ್ನು ಬ್ರೀಚ್‌ಆಗಿ ನೋಡಕೂಡದು ಎಂದು ನಾನು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸಭೆಯ ಕಲಾಪಗಳನ್ನು ನಾನು ಇಲ್ಲಿಯವರೆಗೆ ವೀಕ್ಷಣೆ ಮಾಡಿದ್ದೇನೆ. ಸದಸ್ಯರ ಹಕ್ಕಾಗಲೀ ಸಭೆಯ ಹಕ್ಕಾಗಲೀ ಅದಕ್ಕೆ ಚ್ಯುತಿ ಬಂದಾಗ ಸಹಜವಾಗಿ ಇಲ್ಲಿ ಪ್ರಶ್ನೆಯನ್ನು ಎತ್ತತಕ್ಕದ್ದು ಸದನದ ಎಲ್ಲಾ ಸದಸ್ಯರ ಹಕ್ಕು ಇರುತ್ತದೆ ಈಗಾಗಲೇ ಕಾನೂನಿನ ಪ್ರಶ್ನೆ ರಾಜ್ಯಾಂಗದ ನಿಯಮಗಳ ಬಗ್ಗೆ ಕೌಲ್ ಮತ್ತು ಷಕ್ಧರ ಪುಸ್ತಕದಲ್ಲಿ ಕಂಡುಬಂದಿರತಕ್ಕ ವಿಚಾರಗಳನ್ನು ಅನೇಕರು ಪ್ರಸ್ತಾಪ ಮಾಡಿದ್ದಾರೆ ಇದು ತಮ್ಮ ಅಂತಿಮ ನಿರ್ಣಯಕ್ಕೆ ಅಣುವು ಮಾಡಿ ಕೊಡತಕ್ಕದ್ದಾಗಿದೆ. ಇಲ್ಲಿ ಏನು ಚರ್ಚೆ ನಡೆದಿದೆ ಅದು ಒಳ್ಳೆಯದು. ಮಾನ್ಯ ಕೃಷ್ಣನ್ ಅವರು ವಿವರವಾಗಿ ಎಲ್ಲಾ ಹೇಳಿದ್ದಾರೆ. ಪಕ್ಷದ ಮೇಲೆ ವಿಚಾರಗಳನ್ನು ಹೇಳುವುದು ಸಹಜವಾದುದು. ಆದ್ದರಿಂದ ಈ ವಿಚಾರವನ್ನು ಇಲ್ಲಿಗೆ ಮುಗಿಸಬೇಕು. ಏಕೆಂದರೆ ಪದಗಳ ಪ್ರಯೋಗದಿಂದ ಮತ್ತೆ ಕೆಲವೊಮ್ಮೆ ಹೀಟಿಂಗ್ ಆಗಿ, ಪದಗಳ ಪ್ರಯೋಗವಾಗುವುದಕ್ಕೆ ಅವಕಾಶವಾಗುತ್ತದೆ. ಅದು ಆಗತಕ್ಕಂಥ ಸಂದರ್ಭ ಕೂಡ ಉದ್ಭವವಾಗುತ್ತದೆ. ಅದಕ್ಕೋಸ್ಕರವಾಗಿ ಎರಡೂ ಕಡೆ ಕುಳಿತುಕೊಂಡಿರತಕ್ಕ ಸದಸ್ಯರು ವಿಚಾರವನ್ನು ಹೇಳಿದ್ದಾಗಿದೆ. ಎಲ್ಲಾ ವಿವರಗಳು ತಮಗೆ ಗೊತ್ತಿದೆ. ಅಂತಿಮವಾಗಿ ತಾವು ತೀರ್ಮಾನ ಕೊಡಿ. ಮತ್ತೆ ಇದು ಹೆಚ್ಚಿನ ಚರ್ಚೆಗೆ ಹೋಗದ ಹಾಗೆ ನಿಲ್ಲಿಸುವುದು, ಒಳ್ಳೆಯದು, ಸದನದ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು, ಇಲ್ಲದೇ ಹೋದರೆ ಚರ್ಚೆ ಮುಗಿಯುವುದಿಲ್ಲ, ಮಾನ್ಯ ಸಚಿವರೂ ಕೂಡ ಇದನ್ನು ಗಮನಿಸುವುದು ಒಳ್ಳೆಯದು. ಇದರ ಅರ್ಥ, ಸದನದ ಯಾವುದೇ ಕಡೆ ಕುಳಿತುಕೊಂಡಿರತಕ್ಕ ಸದಸ್ಯರಿಗೆ ನೋವಾಗತಕ್ಕ ರೀತಿಯಲ್ಲಿ ಮಾತನಾಡುವುದು ಒಳ್ಳೆಯದಲ್ಲ. ಇಂತಹ ಪದಗಳನ್ನು ಉಪಯೋಗಿಸುವುದು ಅದನ್ನು ಪಾರ್ಲಿಮೆಂಟರಿಯೋ ಅನ್‌ಪಾರ್ಲಿಮೆಂಟರಿಯೋ ನೋಡಿ ಕಡತದಿಂದ ತೆಗೆದುಹಾಕುವುದು ಇದೆಲ್ಲಾ ಒಳ್ಳೆಯದಲ್ಲ. ಆದಷ್ಟು ಇನ್ನೊಬ್ಬರ ಮನಸ್ಸಿಗೆ ನೋವು ಆಗದ ಹಾಗೆ ಪದಗಳ ಬಳಕೆಯಲ್ಲಿ ಸ್ವಲ್ಪ ಎಚ್ಚರಿಕೆ ಇರುವುದು ಒಳ್ಳೆಯದು. ಒಂದು ಪದ ಪ್ರಯೋಗ ಮಾಡಿದರೆ ಅನ್ ಪಾರ್ಲಿಮೆಂಟರಿ ಅಲ್ಲದೇ ಹೋದರೂ ಕೂಡ ಪ್ರತಿಕ್ರಿಯೆ ವ್ಯಕ್ತಪಡಿಸುವುದಕ್ಕೆ ಅವಕಾಶವಾಗುತ್ತದೆ.

ಆದುದರಿಂದ ಆದಷ್ಟು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸತಕ್ಕ ಸಂದರ್ಭದಲ್ಲಿ ಸ್ವಲ್ಪ ಎಚ್ಚರ ವಹಿಸುವುದು ಒಳ್ಳೆಯದು.

ಡಾ. ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಇಲ್ಲಿಗೆ ಮುಗಿಸುವುದು ಒಳ್ಳೆಯದು ಎಂದು ಹೇಳುವವರಲ್ಲಿ ನಾನೂ ಒಬ್ಬ. ತಾವು ಅಪ್ಪಣೆ ಕೊಡಿಸಿದಿರಿ, ನಾರಾಯಣ ಕುಮಾರ್‌ರವರು ಹೇಳಿದ್ದಕ್ಕೆ ವಿವರಣೆ ಕೊಡಿ ಎಂದು, ಅವರು ಹೇಳಿದರು. ಆಮೇಲೆ ನಿನ್ನೆ ದಿವಸ ಮಾನ್ಯ ಉಪಾಧ್ಯಕ್ಷರು, ಮಾನ್ಯ ಒಡೆಯರಾಜ್‌ರವರಿಗೆ, ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದ್ದು ಮತ್ತು ಕಡತದಲ್ಲಿರತಕ್ಕ ವಿಚಾರದ ಬಗ್ಗೆ ಹೇಳುವುದಾದರೆ ಹೇಳಿ ಎಂದು ಕೇಳಿದರು ಅದರ ಬಗ್ಗೆ ಅವರು ಬಾಯಿಬಿಡಲಿಲ್ಲ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಸದಸ್ಯರ ಮೇಲೆ ಆರೋಪ ಮಾಡಿಲ್ಲ ಅಂದರೆ 35 ಜನ ಸದಸ್ಯರು ಯಾರು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆ ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಒಡೆಯರಾಜ್‌ರವರು ಹೇಳಲಿಲ್ಲ ಅಂದರೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ, ಇದರ ಬಗ್ಗೆ ದಯವಿಟ್ಟು ವಿವರಣೆ ಕೊಡಿ ಎಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ತಿಮ್ಮೇಗೌಡರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ, ಅದರ ಬಗ್ಗೆ ಶ್ರೀಮಾನ್ ಒಡೆಯರಾಜ್‌ರವರು ಏನು ಹೇಳುತ್ತಾರೋ ಹೇಳಲಿ. ಹೇಳದೇ ಹೋದರೆ ಇದರ ಬಗ್ಗೆ ನಾನೂ ಕೂಡ ಹೇಳಬೇಕಾಗಿದೆ. ಅವರು ದಯವಿಟ್ಟು ಏನಾದರೂ ಹೇಳುವುದಿದ್ದರೆ ಹೇಳಲಿ, ಇದರ ಬಗ್ಗೆ ನನಗೆ ಮಾತನಾಡುವುದಕ್ಕೆ ಅವಕಾಶಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೃಷ್ಣಪ್ಪನವರೂ, ಇತರೇಯವರೂ ಇದರಲ್ಲಿ ಹಕ್ಕುಚ್ಯುತಿ ಬರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಅವರು ತಪ್ಪು ಅಭಿಪ್ರಾಯದಿಂದ ಮಾತನಾಡಿದ್ದಾರೆ ಎಂದು ನನಗನ್ನಿಸುತ್ತದೆ. ಏತಕ್ಕೆಂದರೆ, ನಮ್ಮ ಪಕ್ಷದ ವಿಚಾರವಾಗಿ ನಾನೇನೂ ಹಕ್ಕುಚ್ಯುತಿ ನಿರ್ಣಯ ತಂದಿಲ್ಲ. ಮಾನ್ಯ ವಡೆಯರಾಜ್ ಅವರು ಮುಖ್ಯವಾಗಿ ಜನತಾ ಪಕ್ಷದ ಶಾಸಕರು ಈ ರೀತಿ ಲಂಚ ತೆಗೆದುಕೊಂಡು ವರ್ಗಾವರ್ಗಿ ಮಾಡಿಸುತ್ತಾ ಇದ್ದಾರೆ ಎಂದು ಶಾಸಕರ ಮೇಲೆ ಆಪಾದನೆ ಮಾಡಿರುವುದರಿಂದ ನಾವು ಹಕ್ಕುಚ್ಯುತಿ ನಿರ್ಣಯವನ್ನು ತರಬೇಕಾಗಿ ಬಂತು. ಆದರೆ ಬೇರೆ ಬೇರೆ ಪಕ್ಷಗಳು ಈ ಒಂದು ಪಕ್ಷವನ್ನು ಅಥವಾ ಸರ್ಕಾರವನ್ನು ಬೈಯ್ದರೆ ನಾವು ರಾಜಕೀಯವಾಗಿ ಏನು ಮಾಡಬೇಕೋ ಅದು ಗೊತ್ತಿದೆ, ನಾವು ಮಾಡುತ್ತೇವೆ. ಯಾವಾಗ ಶಾಸಕರನ್ನು ಇಂಡಿವಿಜುಯಲ್ಲಾಗಿ ಬೈಯುತ್ತಾರೆ, ಅವರ ಮೇಲೆ ಆಪಾದನೆ ಹೊರಿಸುತ್ತಾರೆ ಆಗ ಇದನ್ನು ಬಿಟ್ಟು ಬೇರೆ ಯಾವ ರೀತಿಯಲ್ಲೂ ಮಾಡುವುದಕ್ಕಾಗುವುದಿಲ್ಲ. ಯಾರೇ ಆಗಲಿ ಶಾಸಕರ ಹಕ್ಕನ್ನು ಕಾಯಬೇಕಾದುದು ಸದನದ ಕರ್ತವ್ಯ. ಆದುದರಿಂದ ಮೆಜಾರಿಟಿ ಸದಸ್ಯರ ಗೌರವಕ್ಕೆ ಚ್ಯುತಿ ಬಂದಿರುವುದರಿಂದ ಹಕ್ಕುಚ್ಯುತಿ ಆಗೇ ಆಗುತ್ತದೆ. ಮಾನ್ಯ ಕೃಷ್ಣಪ್ಪನವರು ಏನು ಹೇಳಿದ್ದಾರೆ ಅದು ಈ ವಿಚಾರಕ್ಕೆ ಸಂಬಂಧಪಡುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ತಿಮ್ಮೇಗೌಡರು ಮಾನ್ಯ ಒಡೆಯರಾಜ್‌ರವರಿಗೆ ಈ ರೀತಿ ಹೇಳಿದರೆ ಮಾಡಬಹುದು ಎಂದು ಹೇಳಿದರು. ಜನತಾ ಶಾಸಕರ ಮೇಲೆ ಆಪಾದನೆ ಮಾಡಿಲ್ಲ ಎಂದು ಹೇಳಿದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಜನತಾ ಶಾಸಕರು ಭ್ರಷ್ಟಾಚಾರ ಮಾಡುತ್ತಿದ್ದಾರೆಂದು ಎಲ್ಲಾ ಪತ್ರಿಕೆಗಳಲ್ಲೂ ಹೆಡ್ ಲೈನಿನಲ್ಲೂ ಬಂದಿದೆ. ಪುನ: ಅವರು ಅದನ್ನು ಸಾಬೀತು ಮಾಡುತ್ತೇವೆಂದು ಹೇಳಿದ್ದಾರೆ ಕಡತ ತೆಗೆಸಿ ನೋಡಬಹುದು ಎಂದು ಹೇಳಿದೆ. ಅವರು ದಾಖಲೆಗಳು ನನ್ನ ಹತ್ತಿರ ಇದೆ ಎಂದು ಹೇಳಿದ್ದಾರೆ, ಇವತ್ತಿನ ಪತ್ರಿಕೆಯಲ್ಲಿ ಅದೂ ಬಂದಿದೆ, ಇದನ್ನು ಹಗುರವಾಗಿ ತೆಗೆದುಕೊಂಡರೆ ಕಷ್ಟವಾಗುತ್ತದೆ ನಾವು ಇಲ್ಲಿ ಕುಳಿತು ಸದನದ ಕಾರ್ಯವನ್ನು ಮಾಡುವುದಕ್ಕೆ ಆಗದೇ ಹೋಗುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರು ನಮ್ಮ ಗೌರವವನ್ನು ಕಾಯಬೇಕು, ಮತ್ತು ಈ ಹಕ್ಕುಚ್ಯುತಿ ನಿರ್ಣಯವನ್ನು ಪುರಸ್ಕರಿಸಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ಕೃಷ್ಣಪ್ಪನವರು ಹೇಳಿದಂತೆ ಲೋಕಸಭೆಯ ತೀರ್ಮಾನ ಈ ಸಂಧರ್ಭದಲ್ಲಿ ಹೊಂದುವುದಿಲ್ಲ ಎಂದು ನನ್ನ ಭಾವನೆ. ಸ್ಪಷ್ಟವಾದ ಮಾತಿನಲ್ಲಿ ಪ್ರೊಸೀಡಿಂಗ್ಸ್‌ನ್ನು ಓದಿ ಹೇಳಿದ್ದಾರೆ, 'ದುಡ್ಡು ತೆಗೆದುಕೊಂಡು ಮಾಡತಕ್ಕ ಕೆಲಸ' ಎಂದು ಸ್ಪಷ್ಟವಾಗಿದೆ. ಅದು ಹಾಗೇ ಇದ್ದರೆ ಅವರು ಹೇಳುವುದರಲ್ಲಿ ಸತ್ಯವಿದೆ, ಜನತಾ ಪಕ್ಷದ ಶಾಸಕರು ಲಂಚ ತೆಗೆದುಕೊಂಡು ಈ ಕೆಲಸ ಮಾಡಿದ್ದಾರೆ ಎಂದು ಶಾಶ್ವತವಾಗಿ ಉಳಿಯುತ್ತದೆ. ಆಮೇಲೆ ಇದನ್ನು ಅಳಿಸುವುದು ಬಹಳ ಕಷ್ಟ. ಇದು ಇಲ್ಲಿ ನೇರವಾಗಿ ಬಳಸುವಂಥ ಪದ ಅಲ್ಲ ಮತ್ತು ಅನ್‌ಪಾರ್ಲಿಮೆಂಟರಿ ಪದ ಅಲ್ಲ. ನಾನು ಪದದ ಮೇಲೆ ವ್ಯಾಖ್ಯಾನ ಮಾಡುತ್ತಾ ಇಲ್ಲ. ಪದವನ್ನು ಉಪಯೋಗಿಸಿದರೆ ಅದರ ಪರಿಣಾಮ ಏನು ಎನ್ನುವುದರ ಕಡೆ ಗಮನಕೊಡಬೇಕು. ಇಂತಹ ದುಷ್ಪರಿಣಾಮ ಉಂಟು

ಮಾಡತಕ್ಕ ಸಂದರ್ಭವಿರುವುದರಿಂದ ಅವರು ಈ ಪದ ಬಳಸಿರುವುದು ತಪ್ಪು ಎನ್ನತಕ್ಕ ಅಭಿಪ್ರಾಯ ನನ್ನದು. ಇದು ನೇರವಾದಂಥ ಆಪಾದನೆ ಇದೆ. ಇದನ್ನು ಕಡತದಿಂದ ತೆಗೆದುಹಾಕುವುದು ಮಾತ್ರವಲ್ಲ ಅವರು ಕ್ಷಮಾಪಣೆ ಕೇಳತಕ್ಕ ಸಂದರ್ಭ ಇದು. ಇಲ್ಲದೇಹೋದರೆ ಇಂತಹ ಆಕ್ಷೇಪಣೆಗಳನ್ನು ನೇರವಾಗಿ ಮಾಡಿ ತಪ್ಪಿಸಿಕೊಂಡರೆ ಕಡತದಲ್ಲಿ ನಿಂತು ಇಡೀ ಜನತೆಯಲ್ಲಿ ಶಾಶ್ವತವಾಗಿ ಉಳಿಯುವ ಹಾಗೆ ಒಂದು ಚಿತ್ರ ಮೂಡುವಂಥಾದ್ದು ಈ ಸಭೆಯ ಗೌರವಕ್ಕೆ ಕಡಿಮೆ ಎನ್ನುವುದು ನನ್ನ ಭಾವನೆ ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಹುಚ್ಚಮಾಸ್ತಿಗೌಡರು ಮಾತನಾಡು ವಾಗ ಅವರಿಗೆ ಸಹಾಯ ಮಾಡುವುದಕ್ಕೆ ಕೇಳೋಣ ಎಂದು ಇದ್ದೆ ಅಷ್ಟೆ. ಈಗ ಒಂದು ಮಾತು ಇದೆ. ನಾನು ಪ್ರಿವಿಲೇಜ್ ಮೇಲೆ ಮಾತನಾಡುವುದಿಲ್ಲ. ತಾವು ಮೊನ್ನೆ ಕಡತವನ್ನು ತೆಗೆಸಿ ನೋಡುತ್ತೇನೆ ಎಂದು ಹೇಳಿದಿರಿ. ನಿನ್ನೆಯ ದಿವಸ ತಾವು ಅದನ್ನು ತರಿಸಿ ನೋಡಿದೆ, ನನ್ನ ಗಮನಕ್ಕೆ ಅಷ್ಟು ಬರಲಿಲ್ಲ, ನಂತರ ಟೇಪ್ ತರಿಸಿ ನೋಡಿದಾಗ ಅದರಲ್ಲಿ ಈ ಮಾತು ಇತ್ತು ಎಂದು ಹೇಳಿದಿರಿ. ನಾವು ಮಾತನಾಡಿದ್ದು ಇಲ್ಲಿ ಟೇಪ್ ಕೂಡ ಆಗುತ್ತಿದೆ. ಇದರ ದಗ್ಗೆ ನೋಟೀಸ್ ಏನು ಕೊಟ್ಟಿದ್ದಾರೆ ಅದನ್ನು ನೋಡಿದ್ದೀರಿ. ಮಾನ್ಯ ಹುಚ್ಚಮಾಸ್ತಿಗೌಡರು ಅದನ್ನು ನೋಡಿದ್ದಾರೊ ಇಲ್ಲವೋ ಗೊತ್ತಿಲ್ಲ. ಅದರಲ್ಲಿ ಹೀಗಿದೆ. ಈ ದಿನ ಪತ್ರಿಕೆಯಲ್ಲಿ ಅಂದರೆ 25-8-83ರ ಪ್ರಮುಖ ಪತ್ರಿಕೆಯಾದ ಕನ್ನಡ ಪ್ರಭ ಪತ್ರಿಕೆಯಲ್ಲಿ ಜನತಾ ಶಾಸಕರು ವರ್ಗಾವರ್ಗಿಗಳಲ್ಲಿ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಲೋಕೋ ಪಯೋಗಿ ಇಲಾಖೆಯಲ್ಲಿ ನೈತಿಕ ಬಲ ಕುಗ್ಗಿದೆ ತನಿಖೆಗೆ ಏರ್ಪಾಟು ಮಾಡಿದರೆ ಮಾಡುತ್ತೇನೆ ಎಂದು ಒಡೆಯರಾಜ್ ಅವರು ಆಪಾದಿಸಿದ್ದಾರೆ. ಮುಂಜಾನೆ ಪತ್ರಿಕೆಯಲ್ಲೂ ಸಹ ಬಂದಿದೆ. ಜನತಾ ಶಾಸ ಕರ ಭ್ರಷ್ಟಾಚಾರ, ತೀವ್ರ 'ಆರೋಪ ಬಂದಿದೆ.' ಮಾನ್ಯ ಕೃಷ್ಣಪ್ಪನವರು ಏನು ಓದಿ ಹೇಳಿದರು ಅದು ಅನ್ವಯವಾಗುವುದಿಲ್ಲವೊ ಅಥವಾ ಅದಕ್ಕೆ ಸಹಾಯ ಮಾಡುತ್ತದೊ ಏನೋ. ಒಟ್ಟನಲ್ಲಿ ಅವರು ಕೊಟ್ಟಿರತಕ್ಕ ನೋಟೀಸಿನಲ್ಲಿ ಈ ವಾಕ್ಯ ಇದೆ. ಮಾನ್ಯ ಹುಚ್ಚಮಾಸ್ತಿಗೌಡರವರು ಮಾತನಾಡುವಾಗ ಅವರ ಗಮನಕ್ಕೆ ಬಂದಿದೆಯೋ ಇಲ್ಲವೊ ಎಂದು ಹೇಳುತ್ತಿದ್ದೆ ಅಷ್ಟೆ.

2-00 p.m.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಉಪಯೋಗಿಸಿರತಕ್ಕ ಪದವನ್ನು ನೋಡಿದ್ದೇನೆ. ಅದನ್ನು ಗಮನಕ್ಕೆ ತೆಗೆದುಕೊಂಡು ತೀರ್ಮಾನಿಸಬೇಕಾಗಿದೆ. ಇಲ್ಲಿ ಏನು ನಡೆದಿದೆ, ಅವರು ಯಾವ ಪದವನ್ನು ಉಪಯೋಗಿಸಿದ್ದಾರೆ ಎನ್ನತಕ್ಕದ್ದನ್ನು ಸಹ ನೋಡಿ ತೀರ್ಮಾನ ಮಾಡಬೇಕಾಗಿದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಹಕ್ಕು ಚ್ಯುತಿ ನಿರ್ಣಯಕ್ಕೆ ಅನುಮತಿ ಕೊಡಬೇಕು ಎನ್ನುವ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ತಾವು ಇದರ ಬಗ್ಗೆ ರೂಲಿಂಗ್ ಕೊಟ್ಟರೆ ಅದು ಒಂದು ಮಹತ್ವದ ರೂಲಿಂಗ್ ಆಗುತ್ತದೆ. ಇದು ಯಾವುದೇ ಒಂದು ಪಕ್ಷದ ವ್ಯಕ್ತಿಯ ಪ್ರಶ್ನೆಯುಲ್ಲ, ಅವರು ಚರ್ಚೆ ನಡೆಯತಕ್ಕ ಕಾಲದಲ್ಲಿ ಪ್ರಸ್ತಾಪ ಮಾಡಿ ಹೇಳಿದ್ದಾರೆ. ಹೊರಗಡೆಯಲ್ಲಿ ಆಗಲೀ ಅಥವಾ ಬಾಯ ಲ್ಲಾಗಲೀ ಹೇಳಿದ್ದರೆ ಅದು ಹಕ್ಕು ಚ್ಯುತಿಗೆ ಬರುತ್ತಿತ್ತೊ ಇಲ್ಲವೋ ಎನ್ನುವುದು ಪರಿಶೀಲನೆ ಮಾಡ ತಕ್ಕ ಅಂಶವಾಗಿದೆ. ಆದರೆ ಅವರು ಈ ಸದನದ ಒಳಗಡೆಯೇ ಟೀಕೆ ಮಾಡಿರುವುದರಿಂದ ಇದರಲ್ಲಿ Absolute immunity ಇದೆ ಎನ್ನುವ ಪ್ರಶ್ನೆ ಬರುತ್ತದೆ. ಈ ಸದನದಲ್ಲಿ ನಾವು ಕಾರ್ಯ ಕಲಾಪಗಳನ್ನು ನಡೆಸುವಾಗ ಪ್ರತಿಯೊಬ್ಬ ವ್ಯಕ್ತಿಗೂ ಮುಕ್ತ ವಾತಾವರಣದಲ್ಲಿ ಸ್ವತಂತ್ರವಾಗಿ ಟೀಕೆ ಮಾಡತಕ್ಕ ಹಕ್ಕಿದೆ ಎನ್ನತಕ್ಕದನ್ನು ಒಪ್ಪುತ್ತೇನೆ. ಯಾರೋ ಒಬ್ಬರು ಇಮ್ಯೂನಿಟಿ ಇಲ್ಲವೆಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—Absolute immunity ಇದೆ, ಇಲ್ಲವೆಂದು ಹೇಳಲಿಲ್ಲ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಎಂದು ಕಾಣು ತ್ತದೆ. ಯಾವುದೇ ಟೀಕೆ ಮಾಡಿದರು ಸಹ ಅದಕ್ಕೆ ಅಬ್ಸಲೂಟ್ ಇಮ್ಯೂನಿಟಿ ಎನ್ನುವ ಅರ್ಥದಲ್ಲಿ ಹೇಳಿದರು.

ಶ್ರೀ ಕೆ. ಹೆಚ್. ರಂಗನಾಥ್.—Unrestrained License ಇಲ್ಲ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಒಟ್ಟನಲ್ಲಿ ಅದು ಪ್ರಿವಿಲೇಜ್ ಮೋಷನ್‌ಗೆ ಬರುತ್ತದೆಯೋ ಇಲ್ಲವೋ ಎನ್ನುವ ಪ್ರಶ್ನೆ ಇದೆ. ಇದಕ್ಕೆ ಉತ್ತರ ಹೇಳುತ್ತಿದ್ದೇನೆ. ಅವರು ಗುರುತರವಾದ ಅಪಾ ದನೆ ಮಾಡಿದ್ದಾರೆ ಅದಕ್ಕೆ ರಾಜಕೀಯವಾಗಿ ಇತ್ತಕಡೆಯಿಂದ ಉತ್ತರ ಕೊಟ್ಟರೆ ಅದು ಅಲ್ಲಿಗೆ ಮುಕ್ತಾಯವಾಗಬಹುದು ಎನ್ನುವ ಅರ್ಥದಲ್ಲಿ ಹೇಳಿದರು. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಕೆಲವು ನಿದರ್ಶನಗಳು ಲೋಕಸಭೆಯ ಮುಂದೆ ಕೂಡ ಬಂದಿರಬಹುದು. ಆದರೆ, ಇಲ್ಲಿ ಸದನದಲ್ಲಿ ಗುರುತರವಾದ ಆಪಾದನೆ ಮಾಡುವಾಗ ಅದಕ್ಕೆ ಸೂಕ್ತವಾದ ರಾಜಕೀಯವಾಗಿ ವೀರ್ಯವತ್ತಾದ ಉತ್ತರ

ಕೊಟ್ಟರೆ ಈ ವಿಷಯವನ್ನು ಅಲ್ಲಿಗೆ ಕೈ ಬಿಡಬಹುದು ಎನ್ನುವ ಅರ್ಥದಲ್ಲಿ ಮಾನ್ಯ ಸದಸ್ಯರೊಬ್ಬರು ಹೇಳಿದರು. ಈ ಟೀಕೆಯನ್ನು ಸರ್ವೇ ಸಾಮಾನ್ಯವಾಗಿ ಮಾಡಿದ್ದರೆ ಅದು ಬ್ರೀಜ್ ಆಫ್ ಪ್ರಿವಿಲೇಜ್ ಆಗುತ್ತಿತೋ ಇಲ್ಲವೋ ಎನ್ನುವ ಪ್ರಶ್ನೆ ಬೇರೆ. ಆದರೆ ಮಾನ್ಯ ಸದಸ್ಯರು ಸದನದ ಒಳಗಡೆಯೇ ಹಿರಿಯ ಸದಸ್ಯರಾದ ಶ್ರೀ ಜಿ. ಪಿ. ಒಡೆಯಸಾಜ್‌ರವರು ಮಾಡಿದ್ದಾರೆ. ಆದುದರಿಂದ ತಾವು ರೂಲಿಂಗ್ ಮಾಡುವುದಕ್ಕಿಂತ ಮುಂಚಿತವಾಗಿ ಇದರ ಬಗ್ಗೆ ಕೂಡ ತಾವು ನೋಡಬೇಕಾಗಿದೆ. ಶ್ರೀ ಎಂ. ಎಸ್. ಕೃಷ್ಣನ್‌ರವರು ಹೇಳಿದರು ಅವರು ಇಷ್ಟು ತೀವ್ರವಾದಂಥ ಆಪಾದನೆ ಮಾಡಿದರೂ ಕೂಡ ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲವೆಂದು;

Sri M. S. Krishnan.—Sir, I am quoting practice and Procedure of Parliament by Sri M. N. Kaul and Sri S. L. Shakdher, Volum-l, page-189 wherein it has been observed thus :

"When a Member violates any of these restrictions, the Speaker may direct him to discontinue his speech or order the defamatory, indescent. unparliametary or undignified words used by the Member be expunged from the proceedings of the House or direct the Member to withdraw from the House or put the question of suspension of the Member from the service of the House".

Sri P. Ramdev.—The hon. Member Sri G. P. Wadeyaraj said that he would prove the allegations made by him, He was not called to order by the Speaker. That is why we had to move this Privilege Motion against him.

Sri K. G. Maheshwarappa.—Sir, when a serious allegation was made against a section of the House, those observations were not expunged or he was not called to order and that is the reason, why we were compelled to move a Privilege Motion against him. If those allegations were expunged or the hon. Member was asked to apologise, this situation would not have arisen. So far as I am concerned, personally, I am satisfied, if the hon. Member is called to order and directed to withdraw those remarks. He has exceeded the limit of the privileges of the Members.

ಶ್ರೀ ಪಿ. ರಾಮದೇವ್.—ಅಪಾದನೆಗಳನ್ನು ಪ್ರೂಪ್ ಮಾಡುತ್ತೇವೆಂದು ಹೇಳುತ್ತಾರೆ, ಅದಕ್ಕೆ ತಾವು ಏನು ಮಾಡುತ್ತೀರಿ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಶ್ರೀ ಒಡೆಯರಾಜ್‌ರವರು ಅಪಾದನೆ ಮಾಡಿರತಕ್ಕದ್ದನ್ನು ಎಕ್ಸ್‌ಪಂಚ್ ಮಾಡಿಲ್ಲ. ಆದುದರಿಂದ ಈ ಅಂಶಗಳನ್ನು ತಮ್ಮ ಗಮನಕ್ಕೆ ತಂದು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕೆಂದು ಸೂಚನೆ ಮಾಡಿದ್ದೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಸಭಾಧ್ಯಕ್ಷರೇ, ಜವಾಬ್ದಾರಿಯುತವಾಗಿ ಒಬ್ಬ ಸದಸ್ಯರು ಮಾತನಾಡುತ್ತಿರುವಾಗ ಇನ್ನಿತರ ಸದಸ್ಯರು ಸ್ವಲ್ಪ ತಾಳ್ಮೆಯಿಂದ ಇದ್ದು ಕೇಳಿದ್ದರೆ ಇಂಥಾ ಅನಾಹುತಗಳನ್ನು ತಪ್ಪಿಸಬಹುದಾಗಿತ್ತು. ಹೇಳುವವರಿಗೂ ಮತ್ತು ಕೇಳುವವರಿಗೂ ಅಷ್ಟೇ ತಾಳ್ಮೆ ಇದ್ದಿದ್ದರೆ ಇಂಥಾ ಅರ್ಥ, ಅನರ್ಥಗಳು ಸಂಭವಿಸುತ್ತಾ ಇರಲಿಲ್ಲ. ಕಳೆದ 2-3 ದಿನಗಳ ಹಿಂದೆ ಸನ್ಮಾನ್ಯ ಒಡೆಯರಾಜ್‌ರವರು ಮಾತನಾಡಿದ ಅಂಶದ ಪೂರ್ಣ ವಿವರಗಳು ಪತ್ರಿಕೆಗಳಲ್ಲಿ ಬಂದಿದೆ. ಜನತಾ ಶಾಸಕರು ವರ್ಗಾವಣೆಯಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ ಎನ್ನುವುದನ್ನು ಮಾತ್ರ ಇಷ್ಟು ದಪ್ಪ ಗಾತ್ರದಲ್ಲಿ ಹಾಕಿದ್ದಾರೆ. ಭ್ರಷ್ಟಾಚಾರ ಎನ್ನುವುದನ್ನು ಮಾತ್ರ ದಪ್ಪ ಅಕ್ಷರಗಳಲ್ಲಿ ಹಾಕಿ ಮುಂದೆ ಕೊಟ್ಟಂಥ ಕಾರಣಗಳನ್ನು ಸಣ್ಣ ಅಕ್ಷರಗಳಲ್ಲಿ ಹಾಕಿದ್ದಾರೆ. ಆ ವಿಷಯ ಇವತ್ತು ಕೂಡ ಪ್ರಸ್ತಾಪಕ್ಕೆ ಬಂದು ಹೋಯಿತು. ತಾವು ಕಡತದಿಂದ ತೆಗೆದು ಹಾಕಿದರೂ ಸಹ ಪತ್ರಿಕೆಗಳಲ್ಲಿ ಬಂದಿರತಕ್ಕದ್ದನ್ನು ತೆಗೆದು ಹಾಕುವುದಕ್ಕೆ ಆಗಲಿಲ್ಲ. ಜನರ ಮನಸ್ಸಿನಲ್ಲಿ ಆಗಿರತಕ್ಕ ಪರಿಣಾಮವನ್ನು ತೆಗೆಯುವುದಕ್ಕಾಗಲಿಲ್ಲ. ಆದರೆ ಇವತ್ತು ಸಹ ಜನತಾ ಶಾಸಕರು ವರ್ಗಾವಣೆಯಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎನ್ನತಕ್ಕದರ ಬಗ್ಗೆ ಚರ್ಚೆ ನಡೆಯಿತು ಎನ್ನುವುದು ನಾಳೆ ಕೂಡ ಪತ್ರಿಕೆಗಳಲ್ಲಿ ಬರುತ್ತದೆ, ಅದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ನಾನು ಸೂಕ್ಷ್ಮವಾಗಿ ಇಲ್ಲಿ ಕೂತು ಗಮನಿಸಿದಾಗ ಶ್ರೀಮಾನ್ ಒಡೆಯರಾಜ್

ರವರು ಪದೇ ಪದೇ ಹೇಳಿದರು. ಅದು ಏನೆಂದರೆ ಜನತಾ ಶಾಸಕರು ಭ್ರಷ್ಟಾಚಾರ ಮಾಡಿದ್ದಾರೆ ಎನ್ನ ತಕ್ಕದ್ದನ್ನು ಜನತೆ ಹೇಳುತ್ತಿದ್ದಾರೆ ಎನ್ನತಕ್ಕ ಮಾತನ್ನು ಅವರು ಹೇಳಿದರು. ಈ ಮಾತನ್ನು ಯಾರೂ ಕೂಡ ಗಮನಿಸಲಿಲ್ಲ. ನೀವು ಆಡಳಿತ ಪಕ್ಷದಲ್ಲಿರತಕ್ಕ ದೋಷಕ್ಕೆ ಒಳಗಾಗಿರತಕ್ಕವರು ಅದರ ಬಗ್ಗೆ ಸಮರ್ಥನೀಯವಾಗಿ ಉತ್ತರ ಹೇಳುವುದಕ್ಕೆ ಅವಕಾಶವಿತ್ತು. ಅದನ್ನು ಬಿಟ್ಟು ನಿನ್ನೆ 2 ಗಂಟೆಗಳ ಕಾಲ ಇವತ್ತು 2 ಗಂಟೆಗಳ ಕಾಲ ಒಟ್ಟು 4 ಗಂಟೆಗಳ ಕಾಲ ಏನು ಈ ಸದನದ ವೇಳೆಯನ್ನು ಬಳಸಿಕೊಂಡಿದ್ದೀರಿ. ಅದನ್ನೇ ಸಾರ್ವಜನಿಕರ ಹಿತದೃಷ್ಟಿಯಿಂದ ಜನತೆಯ ಉಪಕಾರವಾಗತಕ್ಕ ವಿಷಯಗಳನ್ನು ತಂದು ಮಾತನಾಡಿದ್ದರೆ ಉಪಕಾರವಾಗುತ್ತಿತ್ತು. ಆದುದರಿಂದ ಹೇಳತಕ್ಕದ್ದನ್ನು ಕೇಳತಕ್ಕದರಲ್ಲಿ ತಾಳ್ಮೆ ಕಳೆದುಕೊಂಡುದರ ಪರಿಣಾಮವೇನಾಯಿತೆಂಬುದನ್ನು ನಾವು ನೋಡಿದ್ದೇವೆ. ಇವತ್ತು ಪತ್ರಿಕೆಯವರು ಬರೆಯುತಕ್ಕ ವಿಧಾನ ಸ್ವತಃ ಗೊತ್ತೇ ಇದೆ. ವಿಧಾನ ಸೌಧದಲ್ಲಿ ಜನತಾ ಶಾಸಕರ ಮೇಲೆ ಭ್ರಷ್ಟಾಚಾರದ ಆರೋಪ ಎನ್ನತಕ್ಕದ್ದನ್ನು 28 ಪಾಯಿಂಟ್‌ನಲ್ಲಿ ಪ್ರಿಂಟ್ ಮಾಡುವುದು ಅಲ್ಲಿಂದ ಮುಂದಿನ ವಿಷಯ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸಿದ್ದರು ಎನ್ನುವ ವಿಷಯವನ್ನು 12 ಪಾಯಿಂಟ್‌ನಲ್ಲಿ ಹಾಕಿ ಮುಕ್ತಾಯ ಮಾಡುತ್ತಾರೆ. ಪತ್ರಿಕೆಯಲ್ಲಿ ಸಣ್ಣ ಅಕ್ಷರದಲ್ಲಿ ಓದುವಷ್ಟು... ಶ್ರೀ ಪಿ. ರಾಮದೇವ್ ನಮಗೆ ಏನು ತೊಂದರೆಯಾಗದೆ, ನಮಗೆ ಏನು ಅಡ್ಡಿ ಆತಂಕವಾಗಿದೆ ಎಂಬುದನ್ನು ನೋಡಿ ಹೇಳಬೇಕು.

ಶ್ರೀ ಹೆಚ್. ಗಂಗಾಧರನ್.—ಪತ್ರಿಕೆಯಲ್ಲಿ ಬರುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ; ಬಂದೆ ಬರುತ್ತದೆ. ನಾವು ಅಂಥ ಪ್ರಚಾರಕ್ಕೆ ಗುರಿ ಆಗಿಲ್ಲವೆಂಬ ಎದೆಗಾರಿಕೆ ಇದ್ದರೆ ಇನ್ನೊಬ್ಬರು ಆಡಿದ ಮಾತಿಗೆ ತಲೆಬಾಗಬೇಕಾಗಿಲ್ಲ. ಇದನ್ನು ರಕ್ಷಣೆ ಮಾಡತಕ್ಕ ಸಮರ್ಥರಿದ್ದೇವೆಂಬುದನ್ನು ತೋರಿಸಿಕೊಳ್ಳುವುದಕ್ಕೆ ಅನೇಕ ಆಧಾರಗಳಿವೆ. ಅದನ್ನು ಕೊಟ್ಟು ಮಾತನಾಡುವುದಕ್ಕೆ ಆಡಳಿತ ಪಕ್ಷಕ್ಕೆ ಅವಕಾಶ ಇದೆ. ಆದ್ದರಿಂದ, ಸಾರ್ವಜನಿಕರ ಹಣ ಖರ್ಚಾಗುವ ಈ ಸಭೆಯ ಕಾಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳೋಣ. ಮಾತನಾಡುವವರು ಹತ್ತು ಜನ ಮಾತನಾಡಿ ಅದು ಸಮರ್ಥನೆ ಕೊಡಲಾರದು ಎಂದು ಹೇಳುವುದಕ್ಕೆ ಬರುತ್ತದೆ. ಹೀಗೆ ವಾದ ವಿವಾದದಲ್ಲಿ ಖಂಡಿಸಬೇಕೇ ಹೊರತು ಕಾಲವನ್ನು ದುರುಪಯೋಗ ಮಾಡಿಕೊಳ್ಳುವುದರಿಂದ ಯಾವ ಸಾಧನೆಯೂ ಆಗುವುದಿಲ್ಲ. ಬಹುಶಃ ಯಾರಾದರೂ ಕಾಲ ವ್ಯಯವಾಗುವುದನ್ನು ನೋಡಿ ಸಂತೋಷಪಟ್ಟಿದ್ದರೆ ಅದರಿಂದ ನಮಗೆ ಒಳ್ಳೆಯದಾಗುವುದಿಲ್ಲ. ಇದಕ್ಕೆಲ್ಲ ಸಮಯ ಹಾಳು ಮಾಡದೆ ದೇಶದ ಸಮಸ್ಯೆಗಳನ್ನು ಕುರಿತು ಮಾತನಾಡುವುದು ಒಳ್ಳೆಯದು. ಆ ದೃಷ್ಟಿಯಿಂದ ರಾಮದೇವ್‌ರವರಲ್ಲಿ ಪ್ರಾರ್ಥಿಸುತ್ತೇನೆ, ಇದನ್ನು ಮುಂದೆ ವಿಸ್ತರಿಸದೆ ಸಮರ್ಥನೀಯ ವಾದ ಮಾಡೋಣ, ಪ್ರತಿಯೊಬ್ಬರಿಗೂ ಮಾತನಾಡುವುದಕ್ಕೆ ಅವಕಾಶ ಇದೆ, ಪ್ರತಿಯೊಂದು ಇಲಾಖೆ ಮೇಲೆ ಮಾತನಾಡುವಾಗ ಟೀಕೆ ಮಾಡುವುದಕ್ಕೆ ಅವಕಾಶ ಇದೆ, ಆಗ ನೇರವಾಗಿ ಟೀಕೆ ಮಾಡೋಣ. ಆದ್ದರಿಂದ, ಇದನ್ನು ಈಗ ಮುಂದುವರಿಸುವುದು ಬೇಡವೆಂದು ಹೇಳುತ್ತೇನೆ. ಮತ್ತು ಆ ಒಂದು ಮನೋಭಾವನೆಯನ್ನು ತಾಳಬಾರದೆಂದು ಮಾನ್ಯ ಒಡೆಯರಾಜ್‌ರವರಲ್ಲಿ ಪ್ರಾರ್ಥಿಸಿ ಈ ವಿಷಯವನ್ನು ಇಲ್ಲಿಗೆ ಮುಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಸ್. ದೊಡ್ಡಮೇಟಿ.—ಯಾರೇ ಸದಸ್ಯರಾಗಲಿ ಮಾತನಾಡುವಾಗ, ಇನ್ನೊಬ್ಬರ ಮೇಲೆ ರಾಡಿ ಎರಚಿದರೆ ನಮ್ಮ ಕೈ ಮೊದಲು ಕೊಳೆಯಾಗುತ್ತದೆಂಬುದನ್ನು ತಿಳಿದುಕೊಳ್ಳಬೇಕು. ಯಾರೇ ಆಗಲಿ ಒಳ್ಳೆಯ ರೀತಿಯಿಂದ ಮಾತನಾಡಬೇಕು, ಮುಷ್ಟಿ ಯುದ್ಧಕ್ಕಿಂತ ಹಕ್ಕುಚ್ಯುತಿ ನಿರ್ಣಯ ತಂದಿರುವುದು ಅವಮಾನ. ನಾವು ನಮ್ಮ ಗೌರವವನ್ನು ಕಾಪಾಡಿಕೊಳ್ಳುವುದು ಹೇಗೆ? ನಾವು ನಮ್ಮ ನೋವನ್ನು ಹೇಗೆ ವ್ಯಕ್ತಪಡಿಸಬೇಕು ? ಮಾತಿನ ಗಾಯ ಚೂರಿ ಗಾಯಕ್ಕಿಂತ ದೊಡ್ಡದು ಎಂಬುದನ್ನು ಮಾನ್ಯ ಒಡೆಯರಾಜ್‌ರವರು ತಿಳಿದುಕೊಳ್ಳಬೇಕು.

Sri G. P. Vodeyaraj.—Let him speak only on the Privilege Motion.

ಶ್ರೀ ಜೆ. ಎಸ್. ದೊಡ್ಡಮೇಟಿ.—ನಮ್ಮ ಶಾಸಕರಿಗೆ ಮಾತಿನಿಂದ ಗಾಯ ಮಾಡಿದ್ದೀರಲ್ಲ ಆ ತಪ್ಪಿಗೆ ನೀವು ಯಾವ ವಾಖಾನೆಗೆ ಹೋಗಬೇಕು ?

ಶ್ರೀ ಜಿ.ಪಿ. ಒಡೆಯರಾಜ್.—ಪ್ರಿವಿಲೇಜ್ ಮೋಷನ್ ಬಗ್ಗೆ ಏನು ಹೇಳಬೇಕೆಂದಿದ್ದೀರಿ ಅವರ ಬಗ್ಗೆ ಮಾತನಾಡಿ. ಅದರ ಮೇಲೆ ಮಾತನಾಡುವುದಕ್ಕೆ ಆತಂಕಪಡಿಸುವುದಿಲ್ಲ. ಅದನ್ನು ಬಿಟ್ಟು ಹಾಗೆ ಮಾಡಬೇಕು, ಹೀಗೆ ಮಾಡಬೇಕೆಂದು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಜೆ. ಎಸ್. ದೊಡ್ಡಮೇಟಿ,—ಕಡತದಲ್ಲಿ ಬೇಕಾದರೆ ತೆಗೆಸಿ ನೋಡಿ. 'ಜನತಾ ಶಾಸಕರು ದುಡ್ಡು ತಿಂದಿದ್ದಾರೆ' ಎಂದು ಸ್ಪಷ್ಟವಾಗಿದೆ. ಮಾತಿನ ಸ್ವಾತಂತ್ರ್ಯ ಎಲ್ಲರಿಗೂ ಇದೆ, ಆದರೆ ಅದು ಸ್ವೇಚ್ಛಾಚಾರಕ್ಕೆ ತಿರುಗಬಾರದು.

Sri G. P. Vodeyaraj.—I have to take serious exception th this. The Hon 'ble Member is addressing me. Let him confine himself to the Privilege Motion and address the Chair.

ಶ್ರೀ ಜೆ, ಎಸ್. ದೊಡ್ಡಮೇಟಿ.—ನಾನು ಈ ಭಾಷಣವನ್ನು ಅಧ್ಯಕ್ಷರ ಮೂಲಕ ಈ ಸಭೆಗೆ ಬಿಟ್ಟಿದ್ದೇನೆ ಅಷ್ಟೆ.

ಅಧ್ಯಕ್ಷರು.—ಹಕ್ಕುಚ್ಯುತಿ ಬಗ್ಗೆ ಮಾತ್ರ ಹೇಳಿ.

ಶ್ರೀ ಎಂ. ರಘುಪತಿ.—ರಾಮದೇವ್ ಮತ್ತಿತರ ಶಾಸಕರು ಒಂದು ಹಕ್ಕುಚ್ಯುತಿ ನಿರ್ಣಯವನ್ನು ಈ ಸಭೆಯ ಮುಂದೆ ತಂದು ಅದನ್ನು ಸದನದ ಮುಂದೆ ಮಂಡಿಸಲು ತಮ್ಮ ಅನುಮತಿ ಪಡೆಯಲಿಕ್ಕೆ ಮತ್ತು ಅದನ್ನು ತಮಗೆ ಮನವರಿಕೆ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡಿದರು. ವಿರೋಧ ಪಕ್ಷದ ನಾಯಕರ ಮಾತುಗಳನ್ನು ನಾನು ಕೇಳಿದ್ದೇನೆ, ಎಂ. ಎಸ್. ಕೃಷ್ಣನ್‌ರವರ ಮಾತುಗಳನ್ನು ಕೇಳಿದ್ದೇನೆ ಮತ್ತು ಇತರೆ ಸದಸ್ಯರೆಲ್ಲರ ಮಾತುಗಳನ್ನು ಕೇಳಿದ್ದೇನೆ. ಈ ಸದನದಲ್ಲಿ ಪಾರ್ಲಿಮೆಂಟರಿ ಪ್ರೊಸೀಜರ್ ಪ್ರಕಾರ ಯಾವ ಸದಸ್ಯರು ಬೇಕಾದರೂ ಯಾವುದೇ ಆಪಾದನೆಯನ್ನು ಮಾಡಬಹುದೆಂಬುದು ನಿರ್ವಿವಾದ ಆದರೆ ಆಪಾದನೆಗಳನ್ನು ಮಾಡುವಾಗ ಬಹಳ ಜವಾಬ್ದಾರಿತನದಿಂದ ಮಾಡಿದರೆ ಸೂಕ್ತವೆಂಬುದು ಎಲ್ಲರ ಅಭಿಪ್ರಾಯ. ಆದರೆ ಯಾವುದೇ ವ್ಯಕ್ತಿಗಳ ಬಗ್ಗೆ ಆಪಾದನೆ ಮಾಡುವಾಗ ಯಾರೂ ನಿಯಮಾವಳಿಗಳನ್ನು ಓದುವುದಕ್ಕೆ ಹೋಗುವುದಿಲ್ಲ. ಏಕೆಂದರೆ, 310, 311 ಹೀಗೆ ಪ್ರತಿಯೊಂದು ನಿಯಮಗಳಲ್ಲಿ ಏನೇನಿದೆ ಎಂಬುದು ತಮಗೆ ಗೊತ್ತಿದೆ. ಅದರಲ್ಲಿ ವ್ಯಕ್ತಿಯನ್ನು ಕುರಿತು ಆಪಾದನೆ ಮಾಡುವಾಗ ಕೈಗೊಳ್ಳಬೇಕಾದ ಕಾರ್ಯವಿಧಾನ ಏನು ಎಂಬುದನ್ನು ಸಂಪೂರ್ಣವಾಗಿ ಕೊಟ್ಟಿದ್ದಾರೆ. ಇಲ್ಲಿ ಆಪಾದನೆ ಮಾಡಿರತಕ್ಕ ವ್ಯಕ್ತಿ ಸದನದ ಹಿರಿಯ ಸದಸ್ಯರು ಶ್ರೀ ಒಡೆಯರಾಜ್ ಅವರು ಸಂಸದೀಯ ವ್ಯವಹಾರಗಳಲ್ಲಿ ಅನುಭವ ಪಡೆದವರು. ಈ ಸದನದಲ್ಲಿ ರಕ್ಷಣೆ ಇದೆ, ಇಲ್ಲವೆಂದು ಹೇಳುವುದಿಲ್ಲ. ಯಾರು ಬೇಕಾದರೂ ಆಪಾದನೆ ಮಾಡುವಾಗ ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಇರಬೇಕು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳು ಅವರ ಕೈಯಲ್ಲಿ ಇರಬೇಕು. ಸಂಬಂಧಪಟ್ಟ ಎಲ್ಲ ವಿವರಗಳನ್ನು ಇಟ್ಟುಕೊಂಡು ಆಪಾದನೆ ಮಾಡುತ್ತಾರೆಂದು ನಂಬಿದ್ದೇನೆ. ಏಕೆಂದರೆ ಅವರು ಹಿರಿಯ ಸದಸ್ಯರು ಮತ್ತು ಅನುಭವಿಗಳು. ಅವರು ಆಪಾದನೆ ಮಾಡಿದಾಗ ಇದನ್ನೆಲ್ಲ ತಮಗೆ ಕಳುಹಿಸಿಕೊಡಬೇಕು. ಯಾರ್ಯಾರು ಎಷ್ಟೆಷ್ಟು ಹಣ ತೆಗೆದುಕೊಂಡಿದ್ದಾರೆ ಮತ್ತು ಯಾರ್ಯಾರು ಏನೇನ ಮಾಡಿದ್ದಾರೆಂಬುದಕ್ಕೆ ಸಂಬಂಧಪಟ್ಟ ದಾಖಲೆಗಳನ್ನೆಲ್ಲ ತಮಗೆ ಕಳುಹಿಸಿಕೊಡಬೇಕು. ಇಂಥ ಆಪಾದನೆಯನ್ನು ಆಡಳಿತ ಪಕ್ಷದ ಸದಸ್ಯರ ಮೇಲೆ ಮಾಡಿರುವುದರಿಂದ ಅದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸದನದಲ್ಲಿ ಹೇಳಿರುವ ವಿಷಯವನ್ನು ಒಂದು ನಿಟ್ಟಿನಲ್ಲಿ ನೋಡಿದರೆ ಮತ್ತು ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಒಂದು ರೀತಿಯಾದರೆ ಜನತಾ ಪಕ್ಷ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂಬ ಅರ್ಥ ಬರುವ ರೀತಿಯಲ್ಲಿ ವಿರೋಧ ಪಕ್ಷದ ಉಪ ನಾಯಕರು ಮಾತನಾಡಿದ್ದಾರೆಂಬ ಭಾವನೆ ಬರುತ್ತದೆ. ಅವರು ಹೇಳಿರುವ ರೀತಿಯಲ್ಲಿ ಇದಕ್ಕೆ ಸಂಬಂಧಪಟ್ಟ ಮಾಹಿತಿಗಳು ಅವರ ಹತ್ತಿರ ಇದ್ದರೆ ಅದನ್ನು ತಮ್ಮ ಹತ್ತಿರ ಕೊಟ್ಟು ಸಾಬೀತು ಮಾಡುವುದು ಒಳ್ಳೆಯದು, ಇಲ್ಲದಿದ್ದರೆ ನಾನು ಪಕ್ಷದ ಬಗ್ಗೆ ಹೇಳಲಿಲ್ಲ, ನಾನು ಯಾವ ಸದಸ್ಯರ ಬಗ್ಗೆಯೂ ಆಪಾದನೆ ಮಾಡಿಲ್ಲವೆಂಬ ಮಾತನ್ನು ಹೇಳಬೇಕಾಗಿತ್ತು. ಅದನ್ನು ಹೇಳದಿದ್ದರೆ ಏನಾಗುತ್ತದೆಂದರೆ ಪತ್ರಿಕೆಯನ್ನು ಇಟ್ಟುಕೊಂಡು ನಾಳೆ ದಿನ ಇದನ್ನೇ ಬೇರೆಯವರು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ಸದನದಲ್ಲಿ ಈ ಆಪಾದನೆ ಬಂದಾಗ ಇದನ್ನು ಜನತಾ ಪಕ್ಷದ ಶಾಸಕರು ಒಪ್ಪಿಕೊಂಡಿದ್ದಾರೆಂಬ ಅರ್ಥ ಬರುತ್ತದೆ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಮಾತನಾಡುತ್ತಾ ಹೇಳಿದರು, ಈ ಸದನದಲ್ಲಿ ಯಾವುದೇ ಭಾಷಣ ಮಾಡುವಾಗ ಆ ಭಾಷಣ ಮಾಡುವ ಹಕ್ಕನ್ನು ಭಾಷಣ ಮಾಡುವವರು ಪಡೆದಿರುತ್ತಾರೆ, ಆದರೆ ಅದು ಅಷ್ಟು ಹಗುರವಾದ ಹಕ್ಕಲ್ಲ, ಅದಕ್ಕೂ ನಿಯಮ ಇದೆ, ಆ ನಿಯಮದ ಪ್ರಕಾರವೇ ಮಾತನಾಡಬೇಕಾಗಿದೆ ಎಂದು ಈ ಪುಸ್ತಕದಲ್ಲಿ ಮುದ್ರಣ ಮಾಡಿರುವ ನಿಯಮಾವಳಿ ಪ್ರಕಾರ ನಾವು ಮಾತನಾಡಬೇಕೇ ಹೊರತು ಬೇರೆ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ನಿನ್ನೆ ದಿವಸ ಉಪಾಧ್ಯಕ್ಷರು ಕುಳಿತಿದ್ದಾಗ ಅವರ ಪರವಾನಗಿಯನ್ನು ಪಡೆದು ಶ್ರೀ ಒಡೆಯರಾಜ್ ಅವರು ಯಾವ ಅರ್ಥದಲ್ಲಿ ಈ ಮಾತನ್ನು ಹೇಳಿದ್ದಾರೆ ಎಂಬುದನ್ನು ಸದನಕ್ಕೆ ವಿವರವಾಗಿ ತಿಳಿಸಿದರೆ ಬಹುಮಟ್ಟಿಗೆ ಸಹಾಯಕವಾಗುತ್ತದೆ ಮತ್ತು ಏನೊಂದು ಅನುಮಾನಕ್ಕೆ ಎಡೆ ಕೊಟ್ಟಿದೆ, ಒಂದು ಪಕ್ಷದ ಮೇಲೆ ಮತ್ತು ಸದಸ್ಯರ ಮೇಲೆ ಏನು ಆಪಾದನೆ ಬಂದಿದೆ ಅದನ್ನು ನಿವಾರಣೆ ಮಾಡಿದಂತಾಗುತ್ತದೆ ಎಂದು ಹೇಳಿದ್ದೆ. ಈ ವಿಷಯವನ್ನು ಮಾನ್ಯ ಬಂಗಾರಪ್ಪನವರು ಮತ್ತು ಡಾಕ್ಟರ್ ತಿಮ್ಮೇಗೌಡರು ಹೇಳಿದ ಹಾಗೆ ಮುಂದುವರೆಸುವುದು ನಮಗೂ ಇಷ್ಟವಿಲ್ಲ. ನಮ್ಮ ಪಕ್ಷದ ಶಾಸಕರಿಗೂ ಇಷ್ಟವಿಲ್ಲ. ಆದರೆ ಆಪಾದನೆಗಳನ್ನು ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡುವುದು ಒಳ್ಳೆ

ಯದು. ಇಲ್ಲದಿದ್ದರೆ ನಾಳೆ ಇದೊಂದು ಕಳವಳವಾಗಿ ಉಳಿಯುತ್ತದೆ. ಇದು ಸದನದ ಸಂಪ್ರದಾಯಕ್ಕೆ ಒಳ್ಳೆಯದಲ್ಲ, ರಾಜಕೀಯದ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮೊಯಿಲಿಯವರು ರಾಜಕೀಯವಾಗಿ ನಿರ್ವೀರ್ಯರು ಎಂದು ನಮಗೆ ಹೇಳಿದ್ದಾರೆ. ನಾನು ಆ ಪದವನ್ನು ಉಪಯೋಗಿಸುವುದಿಲ್ಲ. ರಾಜಕೀಯವಾಗಿ ಅವರು ವೀರರಲ್ಲ ಎಂದು ಹೇಳುತ್ತೇನೆ. ನಾನು ಮತ್ತೆಮತ್ತೆ ಹೇಳುತ್ತೇನೆ. ಯಾವುದೇ ಪದಗಳನ್ನು ನಾವು ಇಲ್ಲಿ ಬಳಸುವಾಗ ಬಹಳ ತಾಳ್ಮೆಯಿಂದ ಎಚ್ಚರಿಕೆಯಿಂದ ಬಳಸಬೇಕು. ಈ ಸದನದಲ್ಲಿ ಮಾತನಾಡುವಾಗ ಕೆಲವು ನಿಬಂಧನೆಗಳನ್ನು ಹಾಕಿಕೊಂಡು ಮಾತಾಡುವುದು ಒಳ್ಳೆಯದು. ಈ ದಿಸೆಯಲ್ಲಿ ಮಾನ್ಯ ಅಧ್ಯಕ್ಷರು ನಿರ್ದೇಶನ ಕೊಡುವುದು ಉತ್ತಮ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.--ಈ ಹಕ್ಕುಚ್ಯುತಿ ವಿಷಯದಲ್ಲಿ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮತ್ತು ತಿಮ್ಮೇಗೌಡರು ಏನು ಅಭಿಪ್ರಾಯ ಪಟ್ಟಿದ್ದಾರೋ ಅದೇ ಅಭಿಪ್ರಾಯ ನಮ್ಮದು ಮತ್ತು ರಾಮದೇವ್ ಅವರದು. ಈ ರೀತಿ ಮಾಡಿದರೆ ಒಳ್ಳೆಯನು. ಇನ್ನೊಂದು ವಿಚಾರ ತಾವು ಕಡತದಲ್ಲಿರುವುದನ್ನು ಓದಿದಿರಿ. ಮಧ್ಯೆ ಚರ್ಚೆ ನಡೆಯಬೇಕಾದರೆ ಕೆಲವು ಮಾತುಗಳು ಬಂದಿದ್ದು ನನಗನಿಸುತ್ತದೆ ಅದನ್ನು ಕಡತದಿಂದ ತೆಗೆದುಹಾಕಿದರೆ ಒಳ್ಳೆಯದು ಎಂದು. ಕೆಲವು ಪದಗಳು ಸರಿಯಾದುದಲ್ಲ. ನಮ್ಮ ಘನತೆ ಗೌರವಕ್ಕೆ ಅದು ಸರಿಹೋಗುವುದಿಲ್ಲ. ಮಾನ್ಯ ಅಧ್ಯಕ್ಷರಿಗೆ ಅಧಿಕಾರ ಇದೆ. ತಾವು ಆ ಮಾತುಗಳನ್ನು ಕಡತದಿಂದ ತೆಗೆದುಹಾಕಿದರೆ ಈ ನಿಲುವಳಿ ಸೂಚನೆಗೆ ಸಂಬಂಧಪಟ್ಟ ವಿಷಯವನ್ನು ಮುಕ್ತಾಯ ಮಾಡಬಹುದು.

ಶ್ರೀ ಪಿ, ರಾಮದೇವ್.—ಮಾನ್ಯ ಅಧ್ಯಕ್ಷರೇ, ಹಕ್ಕುಚ್ಯುತಿ ಸೂಚನೆ ಬಗ್ಗೆ ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.--ಅಪೀಲ್ ಕೂಡ ಮಾಡಿಕೊಂಡಿದ್ದಾರೆ.

ಶ್ರೀ ಪಿ. ರಾಮದೇವ್.—ಕೆಲವರು ಅಪೀಲ್ ಮಾಡಿಕೊಂದಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಕೆ. ಹೆಚ್. ರಂಗನಾಥ್ ಅವರು ಏನು ಹೇಳಿದರು.

ಶ್ರೀ ಕೆ. ಹೆಚ್. ರಂಗನಾಥ್.—ನಾನು ನನ್ನ ಅಭಿಪ್ರಾಯ ಹೇಳಲಿಲ್ಲ, ಮಾನ್ಯ ಹುಚ್ಚಮಾಸ್ತಿಗೌಡರು ಪ್ರಸ್ತಾಪ ಮಾಡುತ್ತಿದ್ದರು. ಈಗ ನಾನು ನೋಟೀಸ್ ಓದಿದೆ. ಅವರು ಪ್ರಿವಿಲೈಜ್ ಕಮಿಟಿ ಅಧ್ಯಕ್ಷರಾಗಿದ್ದರಿಂದ ಅವರು ಮಾತನಾಡುವುದು ಬೇಡ ಎಂದು ಕೇಳೋಣವೆಂದಿದ್ದೆ. ಅಷ್ಟು ಹೊತ್ತಿಗೆ ಅವರು ಅರ್ಧ ಪ್ರಾರಂಭ ಮಾಡಿದ್ದರಿಂದ ಸುಮ್ಮನೆ ಕುಳಿತೆ.

ಶ್ರೀ ರಾಮದೇವ್,—ಮಾನ್ಯ ರಂಗನಾಥ್ ಅವರು ಹುಚ್ಚಮಾಸ್ತಿಗೌಡರು ಮಾತನಾಡುವಾಗ ಒಂದು ಮಾತನ್ನು ಹೇಳದರು ; ಕಡತದಲ್ಲಿಲ್ಲದಿದ್ದರೂ ಪತ್ರಿಕೆಯಲ್ಲಿ ಬಂದಿರುವ ವಿಚಾರದ ಮೇಲೆ ನೋಟೀಸ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಉಪಾಧ್ಯಕ್ಷರು ಮೊದಲು ಸ್ವಲ್ಪ ಭಾಗ ಓದಿದಮೇಲೆ ಕಡತದಲ್ಲಿ ಆ ಪದ ಬಂದಿಲ ಎಂದು ಹೇಳಿದರು. ನಂತರ ಪೂರ್ತಿ ಓದಿದ ಮೇಲೆ ಕಡತದಲ್ಲಿ ಆಪಾದನೆಯನ್ನು ಸ್ಥಿರಗೊಳಿಸಿದೆ ಎಂಬುದು ಗೊತ್ತಾಯಿತು. ಅವರು ಏನು ಆಪಾದನೆ ಮಾಡಿದ್ದಾರೆ ಅದು ಕಡನದಲ್ಲಿ ಬಂದಿದೆ. ಹಣವನ್ನು ಪಡೆದು ಈ ಕೆಲಸದಲ್ಲಿ ತೊಡಗಿದ್ದಾರೆ ಎಂಬುದು ಕಡತದಲ್ಲಿ ಕ್ಲಿಯರ್ ಆಗಿದೆ.

ಶ್ರೀ ಕೆ. ಹೆಚ್. ರಂಗನಾಥ್.—ಈಗ ತಾವು ಹೇಳಿ ಕಡತಕ್ಕೆ ಹೋಗುತ್ತಿದೆ. ಹೇಳದೇ ಇರುವ ವಿಷಯವನ್ನು ತಾವು ಈಗ ಹೇಳುತ್ತಿರುವುದರಿಂದ ಕಡತಕ್ಕೆ ಹೋಗುತ್ತಿದೆ.

ಶ್ರೀ ಪಿ. ರಾಮದೇವ್.—ಅವರು ಹೇಳಿರುವುದು ಕಡತದಲ್ಲಿ ಹೋಗಿದೆ.

ಶ್ರೀ ಮೈಕೆಲ್ ಫರ್ನಾಂಡಿಸ್.—ಹೇಳಿ ಕಡತಕ್ಕೆ ಹೋಗುತ್ತಿದೆ. ಮಾಡಿ ಕಡತಕ್ಕೆ ಹೋಗುತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್,—ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಏತಕ್ಕೆ ಮುಟ್ಟಿ ನೋಡಿಕೊಂಡಿರಿ ?

ಶ್ರೀ ಎಂ, ರಘುಪತಿ.—ಕಳ್ಳರಾದವರು ಈ ಮಾತನ್ನು ಹೇಳುವುದು ಬೇಡ.

ಶ್ರೀ ಮೈಕಲ್ ಫರ್ನಾಂಡಿಸ್.—ಹಿಂದಿನ ಅನುಭವದಿಂದ ಅವರು ಹೇಳುತ್ತಿರಬಹುದು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೆ. ತಾವು ಟೇಪ್ ಕೇಳಿದ ಮೇಲೆ ಸಂಶಯ ಬರುವ ರೀತಿಯಲ್ಲಿ ಆಗಿದೆ ಎಂದು ಹೇಳಿದಿರಿ. ಕಡತದಲ್ಲಿ ಸರಿಯಾಗಿದೆ ಎಂದು ಹೇಳಿದ ಮೇಲೆ ಅದು ಪ್ರಿವಿಲೈಜ್ ಆಗುತ್ತದೋ ಇಲ್ಲವೋ ಎಂಬುದು ತಮ್ಮ ತೀರ್ಮಾನಕ್ಕೆ ಬಿಟ್ಟಿದೆ. ಸಂಶಯ ಬರುವ ರೀತಿಯಲ್ಲಿ ಟೇಪ್‌ನಲ್ಲಿದೆ ಎಂದು ಹೇಳುತ್ತೀರಿ. ಮಾನ್ಯ ಒಡೆಯರಾಜ್ ಅವರು ಆ ಅರ್ಥ ಬರುವಂತೆ ಹೇಳದೆ ಪತ್ರಿಕೆಯಲ್ಲಿ ಆ ಅರ್ಥ ಬರುವಂತೆ ಹೇಳಿರುವುದರಿಂದ ಈ ಬಗ್ಗೆ ವಿವರಣೆ ಕೊಡಿ ಎಂದು ಉಪಾ

ಧ್ಯಕ್ಷರು ಅಲ್ಲಿ ಕುಳಿತಿದ್ದಾಗ ಹೇಳಿದ್ದರು. ಆಗ ಒಡೆಯರಾಜ್ ಅವರು ಬಾಯಿ ಬಿಡಲಿಲ್ಲ. ಇವತ್ತಾದರೂ ಅವರು ವಿವರಣೆ ಕೊಟ್ಟರೆ ಮಾನ್ಯ ರಾಮದೇವ್ ಅವರನ್ನು ಮತ್ತು ಪ್ರಿವಿಲೈಜ್ ಮೋಷನ್ ಕೊಟ್ಟಿರುವ ಇನ್ನಿತರ ಸದಸ್ಯರನ್ನು ವಿತ್‌ಡ್ರಾ ಮಾಡಿಕೊಳ್ಳಲು ಪ್ರಾರ್ಥಿಸುತ್ತೇನೆ. ಆಗ ಈ ವಿಚಾರವನ್ನು ಮುಕ್ತಾಯ ಮಾಡಬಹುದು. ತಾವು ಸಂಶಯ ಬರುವ ರೀತಿಯಲ್ಲಿದೆ ಎಂದು ಹೇಳಿದ ಮೇಲೆ ಅವರು ವಿತ್‌ಡ್ರಾ ಮಾಡಿಕೊಳ್ಳದಿದ್ದರೆ ತಾವು ತಮ್ಮ ತೀರ್ಮಾನವನ್ನು ಕೊಡಬೇಕಾಗುತ್ತದೆ. ರಾಮದೇವ್ ಅವರೂ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಇತರ ಸದಸ್ಯರೂ ಮಾಡಬೇಕಾಗುತ್ತದೆ. ರಾಮದೇವ್ ಅವರು ಈ ವಿಚಾರದಲ್ಲಿ ಸ್ಪಷ್ಟೀಕರಣ ನೀಡುವ ಮೊದಲೇ ತಾವು ಒಡೆಯರ್ ಅವರನ್ನು ಕರೆಸಿ ವಿವರಣೆ ಪಡೆಯಿರಿ, ಈಗ ಅವರು ಹೊರಗಡೆ ಏತಕ್ಕೆ ಎದ್ದು ಹೋದರೋ ಗೊತ್ತಿಲ್ಲ. ಬಹುಶಃ ಈ ಸಂದಿಗ್ಧ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೊರಗಡೆ ಹೋದರೋ ಏನೋ ತಾವು ದಯವಿಟ್ಟು ಮಾನ್ಯ ಒಡೆಯರಾಜ್ ಅವರನ್ನು ಕರೆಸಿ ಸ್ಪಷ್ಟೀಕರಣ ಕೇಳಿ. ಅದಾಗದಿದ್ದರೆ ಮುಂದಿನ ವಿಚಾರ ಪರಿಶೀಲನೆ ಮಾಡುವುದು ಒಳ್ಳೆಯದು.

ಶ್ರೀ ಎಂ. ರಘುಪತಿ.—ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಕೆ. ಹೆಚ್. ರಂಗನಾಥ್ ಅವರು ಮಂತ್ರಿಗಳಾಗಿ ಕೆಲಸ ಮಾಡಿದವರು, ಈಗ ನಾವು ಕೆಲಸ ಮಾಡುತ್ತಿದ್ದೇವೆ. ಈ ರೀತಿ ಆದರೆ ನಾಳೆ ಯಾರನ್ನಾದರೂ ವರ್ಗ ಮಾಡಬೇಕಾದರೆ ಒಡೆಯರಾಜ್ ಹತ್ತಿರ ಪತ್ರ ಬರೆದುಕೊಂಡು ಬನ್ನಿ ಎಂದು ಹೇಳುವ ಸಂದರ್ಭ ಬರುತ್ತದೆ. ಒಡೆಯರಾಜ್ ಸರ್ಟಿಫಿಕೇಟ್ ಕೊಟ್ಟರೆ ಮಾತ್ರ ವರ್ಗ ಮಾಡಬೇಕಾದ ಪರಿಸ್ಥಿತಿ ಬರಬಹುದು. ಆಪಾದನೆ ಮಾಡುವಾಗ ಇಷ್ಟು ದೂರ ಹೋಗಿ ಮಾಡಬಾರದು.

ಶ್ರೀ ಪಿ. ರಾಮದೇವ್.—ಮಾನ್ಯ ತಿಮ್ಮೇಗೌಡರು ಹೇಳಿರುವ ವಿಚಾರದ ಬಗ್ಗೆ ..

ಅಧ್ಯಕ್ಷರು.—ಸದಸ್ಯರು ಸಭೆಯಲ್ಲಿಲ್ಲವಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಪ್ರೊಸೀಡಿಂಗ್ ನೋಡಿದ್ದೀರಿ. ಅದರಲ್ಲಿ ಆ ಮಾತು ತಮಗೆ ಕಂಡುಬರಲಿಲ್ಲ. ಟೇಪ್ ತರಿಸಿ ನೋಡಿದಾಗ ಅದರಲ್ಲಿ ಈ ಮಾತು ಇದೆ, ಶಾಸಕರು ದುಡ್ಡು ಮಾಡಲಿ ಎದು ಮಾಡುತ್ತಿದ್ದೀರೋ ಅಧಿಕಾರಿಗಳು ದುಡ್ಡು ಮಾಡಲಿ ಎಂದು ಮಾಡುತ್ತಿದ್ದೀರೋ ಏತಕ್ಕೆ ಮಾಡುತ್ತಿದ್ದೀರಿ ಎಂದಿದೆ ಎಂದು ಸಭೆಯಲ್ಲಿ ಹೇಳಿದ್ದೀರಿ. ಕಡತದಲ್ಲಿಲ್ಲದೇ ಇದ್ದರೂ ಪತ್ರಿಕೆಯಲ್ಲಿ ಇಲ್ಲದೇ ಇದ್ದರೂ ಪ್ರೊಸಿಡಿಂಗ್ ನೋಡಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಮಾನ್ಯ ಹುಚ್ಚ ಮಾಸ್ತಿಗೌಡರು ಹೇಳಿದರು, ಅದನ್ನೇ ಇಟ್ಟುಕೊಂಡು ಪ್ರಿವಿಲೈಜ್ ಆಗುತ್ತದೋ ಎಂಬ ಪ್ರಶ್ನೆ ಮಾಡುವುದಾದರೆ ಆಗುವುದಿಲ್ಲ ಎಂದು ಹೇಳುವುದಕ್ಕೆ ನಮಗೂ ಸಾಕಷ್ಟು ಆಧಾರಗಳಿವೆ. ಹೇಳದೆ ಇರುವ ವಿಷಯದ ಬಗ್ಗೆ ಮಾನ್ಯ ಸದಸ್ಯರನ್ನು ವಿವರಣೆ ಕೊಡಿ ಎಂದು ಕೇಳುವುದು ಸರಿಯಾದುದಲ್ಲ ಅದು ತಮ್ಮ ರೂಲಿಂಗ್‌ಗೆ ಬಿಟ್ಟಿದೆ. ತಾವು ಏನು ತೀರ್ಮಾನ ಮಾಡುತ್ತೀರೊ ಅದಕ್ಕೆ ನಾವು ಬದ್ಧರಾಗಿರುತ್ತೇವೆ, ಇವರ ಬಾಯಿಯಿಂದ ಹೌದೋ ಅಲ್ಲವೋ ಎಂದು ಹೇಳತಕ್ಕ ಪ್ರಶ್ನೆ ಬರುವುದಿಲ್ಲ. ಈ ಸಭೆ ಇದು ಪ್ರಿವಿಲೈಜ್ ಹೌದೋ ಅಲ್ಲವೋ ಎಂಬ ಬಗ್ಗೆ ವಿಚಾರ ಮಾಡುವುದಾದರೆ ನಾನು ಕೂಡ ಮಾತನಾಡಬೇಕೆಂದಿದ್ದೇನೆ. ಈಗ ಸಾಕಷ್ಟು ಚರ್ಚೆ ಕೇಳಿದ್ದೇನೆ. ಇದರ ಮೇಲೆ ನಾನು ತೀರ್ಮಾನಕ್ಕೆ ಬರುತ್ತೇನೆ ಎಂದು ತಾವು ಹೇಳುವುದಾದರೆ ಅದು ತಮಗೆ ಬಿಟ್ಟದ್ದು. ಮಾನ್ಯ ತಿಮ್ಮೇಗೌಡರು ಹೇಳಿದಂತೆ ಮಾಡುವುದಾದರೆ ಇಲ್ಲಿ ಅಕ್ಸೆಪ್ಟ್ ಮಾಡಿದಂತಾಗುತ್ತದೆ, ಸಮಿತಿ ಮುಂದೆ ಮಾಡಿದಂತಾಗುವುದಿಲ್ಲ. ಪ್ರಿವಿಲೈಜ್ ನೋಟೀಸ್ ಕೊಟ್ಟ ಮೇಲೆ ಮಾನ್ಯ ಸದಸ್ಯರು ಏನು ಹೇಳಬೇಕೋ ಅದನ್ನು ಅಲ್ಲಿ ಹೇಳುತ್ತಾರೆ. ಇಲ್ಲಿ ಹೇಳಿ ಎಂದು ಕೇಳಿದರೆ ಏನರ್ಥ ? ನಾಲ್ಕು ಜನ ಕುಳಿತುಕೊಂಡು ತೀರ್ಮಾನಕ್ಕೆ ಬಂದು ಪ್ರಿವಿಲೆಜ್ ಆಗಿದೆ ಎಂದು ಹೇಳಿದಂತಾಗುತ್ತದೆ. ಇಲ್ಲಿ ಏನು ಹೇಳುತ್ತೀಯೋ ಹೇಳಪ್ಪ ಎಂದು ಕೇಳುವುದು ಸರಿಹೋಗುವುದಿಲ್ಲ.

2–30 p.m.

ಡಾ॥ ಹೆಚ್, ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ನಾನು ಹೇಳಿದ್ದನ್ನು ಮತ್ತು ತಾವು ಹೇಳಿದ್ದನ್ನು ಮಾನ್ಯ ರಂಗನಾಥ್‌ರವರು ಪೂರ್ತಿ ಕೇಳಲಿಲ್ಲವೆಂದು ನನ್ನ ಭಾವನೆ. ಅಧ್ಯಕ್ಷರು ಏನು ಹೇಳಿದರು ಎಂದರೆ· ಈ ಪದಗಳನ್ನು ನೋಡಿದರೆ ಸಂಶಯ ಬರುವ ರೀತಿಯಲ್ಲಿ ಇದೆಯೆಂದು ಹೇಳಿದರು. ಸಂಶಯ ಬರುವ ರೀತಿಯಲ್ಲಿ ಇದೆ ಎಂಬುದು ತಮ್ಮ ಅಭಿಪ್ರಾಯ, ಅದು ಈ ಕಡತದಲ್ಲಿ ಇಲ್ಲ ಎಂದು ಹೇಳಿದ್ದರೆ ಅದನ್ನು ನಾವು ಒಪ್ಪಿಕೊಳ್ಳತಕ್ಕದ್ದು ಹಾಗೂ ಮುಂದೆ ಏನು ಮಾಡಬೇಕೆಂದು ನಿಮಗೆ ಬಿಟ್ಟದ್ದು. ತಾವೇ ಆ ದಿನ ಅಧ್ಯಕ್ಷತೆ ವಹಿಸಿದ್ದೀರಿ, ತಾವು ಟೇಪ್ ಹಾಕಿ ಕೇಳಿದಾಗ ಸಂಶಯ ಬರುವ ರೀತಿಯಲ್ಲಿ ಪದಗಳು ಇವೆ ಎಂದು ತಾವು ಹೇಳಿದಿರಿ.

ಶ್ರೀ ಕೆ. ಹೆಚ್. ರಂಗನಾಥ್.—ಅವರು ಹೇಳಿದ್ದು. ನಾನು ಕೇಳಿದ ಹಾಗೆ ಅದನ್ನು.

ಒಬ್ಬ ಮಾನ್ಯ ಸದಸ್ಯರು.—ಮತ್ತೊಮ್ಮೆ ಸಭೆಯಲ್ಲಿ ಅದನ್ನು ಓದಬೇಕೇ?

ಶ್ರೀ ಕೆ. ಹೆಚ್. ರಂಗನಾಥ್.—ಸಾಯಂಕಾಲದವರೆಗೆ ಓದಲಿ ನಮಗೇನೂ ಇಲ್ಲ. ಇಲ್ಲಿ ಟೇಪನ್ನು ಹಾಕಲಿ, ನಾವೆಲ್ಲಾ ಕೇಳೋಣ.

ಡಾ। ಹೆಚ್. ಎಲ್ ತಿಮ್ಮೇಗೌಡ.—ಅವರು ಹೇಳಿರುವ ಮಾತಿನಲ್ಲಿ ಸಂಶಯು ಬಂದಿರುವುದರಿಂದ ಅವರಲ್ಲಿ ವಿವರಣೆಯನ್ನು ಕೇಳಿ ಎಂದು ಹೇಳಿದೆನೇ ಹೊರತು, ಅವರು ಹೇಳಿದ್ದಾರೆಂದು ವಿವರಣೆ ಕೇಳಿ ಎಂದು ಮಾನ್ಯ ತಿಮ್ಮೇಗೌಡರು ಹೇಳಿದ್ದಾರೆಂದು ಹೇಳುವುದು ಸರಿಯಲ್ಲ. ಮಾನ್ಯ ಅಧ್ಯಕ್ಷರು ಸಂಶಯಾಸ್ಪದ ಪದಗಳು ಇದೆಯೆಂದು ಹೇಳಿದರು. ಸಂಶಯಾತ್ಮಕ ಪದಗಳು ಕಡಿತದಲ್ಲಿ ಇದೆಯೋ ಇಲ್ಲವೋ ಅದನ್ನು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದು ಬೇಡ ; ವಯನ್ಯ ಸದಸ್ಯರು ತಾವು ಹೇಳಿಲ್ಲ ಎಂದು ಹೇಳಿದರೆ ಇದನ್ನು ಮುಗಿಸಬಹುದು ಎಂದು ಹೇಳಿದೆನೇ ಹೊರತು ಇದರ ಮೇಲೆ ಚರ್ಚೆ ಮಾಡಿ ಎಂದು ಹೇಳಲಿಲ್ಲ. ಈ ರೀತಿ ತೀರ್ಮಾನ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.—ಈ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆ ಆಗಿದೆ. ನಮ್ಮ ಬಗ್ಗೆ ಇಲ್ಲಿ ಬ್ಲಾಕ್ ಮೇಲ್ ಆಗಿದ್ದು ನಮಗೆ ಸಾಕಷ್ಟು ಡ್ಯಾಮೇಜ್ ಆಗಿದೆ. ನಮಗೆ ಸ್ವಾತಂತ್ರ್ಯವಾಗಿ ಮಾತನಾಡತಕ್ಕ ಹಕ್ಕು ಇದೆ, ಈ ಸದನದಲ್ಲಿ ನಾವು ನಿರ್ಭಯವಾಗಿ ನಿರ್ಭೀತಿಯಿಂದ ಮಾತನಾಡತಕ್ಕ ಸ್ವಾತಂತ್ರ್ಯ ಇದೆ, ಆದರೆ ಮಾತನಾಡತಕ್ಕ ಸ್ವಾತಂತ್ರ್ಯದಲ್ಲಿ ಸದಸ್ಯರ ಮೇಲೆ ಬ್ಲಾಕ್ ಮೇಲ್ ಮಾಡತಕ್ಕದ್ದು, ಆಪಾದನೆಯ ಸುರಿಮಳೆಯನ್ನು ಹಾಕತಕ್ಕದ್ದಕ್ಕೆ ಎಲ್ಲಿದೆ ಸ್ವಾತಂತ್ರ್ಯ ? ನಾವೂ ಅದೇ ರೀತಿ ಪದಗಳನ್ನು ಬಳಸಿದರೆ ಸದನದ ಗೌರವ, ಘನತೆ ಉಳಿಯುತ್ತದೆಯೇ ? ಬಾಯಿಗೆ ಬಂದಹಾಗೆ, ಮನಸ್ಸಿಗೆ ಬಂದ ಹಾಗೆ ಹೇಳಬಹುದೇ ? ಇಲ್ಲಿ ನಮ್ಮ ಸ್ವಾತಂತ್ರ್ಯಕ್ಕೆ ದಿಗ್ಬಂಧನ ಇಲ್ಲ ಎಂದು ಈ ರೀತಿ ಮಾತನಾಡುವುದಾದರೆ ಎಲ್ಲಿ ರಿಸ್ಟ್ರಿಕ್ಟ್ ಮಾಡುವುದಕ್ಕಾಗುತ್ತದೆ ? ಯಾವ ರೀತಿ ತಡೆಹಿಡಿಯುತ್ತೀರಿ ? ಇನ್ನು ಎರಡನೆಯದಾಗಿ ಮಾನ್ಯ ಮೊಯ್ಲಿಯವರು ಒಬ್ಬರ ಮೇಲೆ 33 ಜನ ಪ್ರಿವಿಲೇಜ್ ಮೋಷನ್ ಕೊಟ್ಟಿದ್ದಾರೆಂದಿದ್ದಾರೆ; ಇಲ್ಲಿ ಒಬ್ಬರು ಅಥವಾ 33 ಜನರ ಪ್ರಶ್ನೆ ಅಲ್ಲ. ಒಬ್ಬರು ಕಾಂಗ್ರೆಸ್ ಪಕ್ಷದ ಉಪನಾಯಕರು ಎಲ್ಲಾ ಶಾಸಕರ ಮೇಲೆ ಹೇಳಿರತಕ್ಕ ಆಪಾದನೆ ಇದು. ಇದು ಒಬ್ಬರ ಮೇಲೆ 33 ಜನರ ಪ್ರಶ್ನೆ ಅಲ್ಲ. ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೂ ಅಲ್ಲ: ಎಲ್ಲರ ಮೇಲೂ ಸಾರಾ ಸಗಟು ಹೇಳಿದ್ದಾರೆ. ನಾನು ಹಾಗೆ ಹೇಳಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳಿಲ್ಲ. ಇದಾದ ಮೇಲೆ ನಿನ್ನೆಯ ದಿವಸ ಅವರು ಏನು ಹೇಳಿದ್ದಾರೆ ಅಂದರೆ .

It has appeared in the Press. I will read that.

> "Deputy leader of the Opposition Sri Govind P, Vodeyaraj said in the Assembly today that he was prepared to prove the allegation that Janata party MLA"s had collected money for getting transfers of officials in the Public Works Department. 'I am prepared to place the list of names in support of my charge if an enquiry is ordered by the Central Brueau of Investigation", Vodeyaraj said."

ಎಂದರೆ ಅವರು ಆಕಸ್ಮಿಕವಾಗಿ ತಪ್ಪು ಹೇಳಿದರು ಎನ್ನುವ ಮಾತು ಅಲ್ಲ. ಅವರ ಹತ್ತಿರ ಡಾಕ್ಯುಮೆಂಟ್ಸ್ ಇವೆ ಎಂದರೆ, ಹೆಸರುಗಳು ಇವೆ ಎಂದರೆ, ಅದನ್ನು ಪ್ರೂಪ್ ಮಾಡುತ್ತೇವೆ ಎಂದರೆ ಈ ನಮ್ಮ ಪೊಸಿಷನ್ ಏನು ಸ್ವಾಮಿ ? ಅವರು ಜವಾಬ್ದಾರಿಯುತವಾಗಿಯೇ ಹೇಳಿಕೆ ಮಾಡಿದ್ದಾರೆ. ಮೊನ್ನೆ ಹೇಳಿಕೆ ಕೊಟ್ಟರು. ನಿನ್ನೆ ಅದನ್ನು ಧೃಡೀಕರಿಸಿದರು. ಈಗ ಇದನ್ನು ನಾವು ಹೀಗೇ ಬಿಟ್ಟರೆ ಅಧ್ಯಯ ಉಳಿದು ಹೋಗುತ್ತದೆ. ಅವರ ಹತ್ತಿರ ಡಾಕ್ಯುಮೆಂಟ್ಸ್ ಇಟ್ಟುಕೊಂಡು ನಾವು ಫೇಸ್ ಮಾಡಿಕೊಂಡು ಹೋಗಲು ಧೈರ್ಯ ಇಲ್ಲ ಎಂದರೆ, ರಾಜಕೀಯವಾಗಿ ಇವರಿಗೆ ಫೇಸ್ ಮಾಡುವ ಶಕ್ತಿ ಇಲ್ಲ ಎಂದು ನಾಳೆ ಮಾನ್ಯ ವೀರಪ್ಪ ಮೊಯ್ಲಿಯವರು ಹೊರಗಡೆ ಮಾತನಾಡಿಕೊಳ್ಳುತ್ತಾರೆ. ಆದುದರಿಂದ ನಾನು ಹೇಳುತ್ತೇನೆ, ಇಷ್ಟೊಂದು ಖಚಿತವಾದ ಆಪಾದನೆಯನ್ನು ಮಾಡಿರುವಾಗ, ಅವರ ಹತ್ತಿರ ಹೆಸರು ಇರುವಾಗ ಯಾರು ಯಾರು ಎಷ್ಟೆಷ್ಟು ಹಣವನ್ನು ಯಾವ ಯಾವ ಇಂಜಿನಿಯರ್‌ನಿಂದ ಕಲೆಕ್ಟ್ ಮಾಡಿದ್ದಾರೆಂದು ಚಾರ್ಜಸ್‌ನ್ನು ಈ ಮನೆಯಲ್ಲಿ ಮಾಡಿದಾಗ ಇದಕ್ಕೆ ಉತ್ತರ ಎಲ್ಲಿ ? ಇದನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇವೆ ಎಂದರೆ ಹೇಗೆ ಸ್ವಾಮಿ ? ಅವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲ. ಹಾಗೂ ನಾನು ಹೇಳೇ ಇಲ್ಲ ಎಂದು ಹೇಳುವುದಕ್ಕೆ ತಯಾರು ಇಲ್ಲ. ಆಪಾದನೆಯನ್ನು ಸ್ಥಿರಪಡಿಸುತ್ತೇನೆಂದು ಹೇಳಿದ್ದಾರೆ, ನನ್ನ ಹತ್ತಿರ ಡಾಕ್ಯುಮೆಂಟ್ಸ್ ಇದೆ ಎಂದು ಹೇಳಿದ್ದಾರೆ, ತಾವು ಲೋಕಸಭೆಯಲ್ಲಿ ಸದಸ್ಯರಾಗಿದ್ದವರು. ತಮಗೆ ಲೋಕಸಭೆಯ ಪ್ರೊಸೀಜರ್ ಗೊತ್ತಿದೆ. ಇಂತಹ

ಒಂದು ಗಂಭೀರವಾದ ಆಪಾದನೆ ಬಂದಿರುವಾಗ ಇಂತಹ ಸಂಶಯುವನ್ನು ಪ್ರತಿಯೊಬ್ಬರೂ ತಮ್ಮ ತಮ್ಮ ತಲೆ ಮೇಲೆ ಹೊತ್ತುಕೊಂಡು, ಯಾವ ಯಾವ ಹೆಸರು ಇದೆಯೋ ಎನ್ನುವ ಒಂದು ಭೀತ ವಾದ ವಾತಾವರಣದಲ್ಲಿ ಕಲಸ ಮಾಡತಕ್ಕ ಪರಿಸ್ಥಿತಿ ಬಂದಿದೆ. ಈ ಸಮಯದಲ್ಲಿ ಹೊರಗಿನ ಜನ ನಮ್ಮನ್ನು ಕೇಳುತ್ತಾರೆ. ನೀವು ಭ್ರಷ್ಟಾಚಾರದ ವಿರುದ್ಧ ಸಮರವನ್ನು ಮಾಡುತ್ತೇವೆಂದು ಪ್ರಣಾ ಳಿಕೆಯಲ್ಲಿ ಹೇಳಿಬಿಟ್ಟರಲ್ಲೀ ಎಂದು ಹೇಳುತ್ತಾರೆ. ಅವರು ಹೇಳಿದ್ದನ್ನು ಪಾಕೆಟ್ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ ? ಆದುದರಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ, ಇದು ತಮಗೆ ಬಿಟ್ಟಿರತಕ್ಕ ವಿಷಯ. ಇದರಲ್ಲಿ ಹಕ್ಕುಚ್ಯುತಿ ಇದೆ, ಕಂಟೆಂಪ್ಟ್ ಕೂಡ ಇದೆ. ಹಕ್ಕುಚ್ಯುತಿಯಲ್ಲಿ ಕಂಟೆಂಪ್ಟ್ ಸಹ ಬರುತ್ತದೆ. ತಾವು ನಮ್ಮೆಲ್ಲರಿಗೂ ರಕ್ಷಣೆಯನ್ನು ಕೊಡಬೇಕು.ಆದುದರಿಂದ ನಮ್ಮನ್ನು ಈ ಆಪಾದನೆಯಿಂದ ಮುಕ್ತ ಮಾಡತಕ್ಕದ್ದು ತಮ್ಮ ಕೈಯ್ಯಲ್ಲಿವೆ. ಆಪಾದನೆಯನ್ನು ಹೊತ್ತು ಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ . ಅವರಲ್ಲಿ ಏನು ಡಾಕ್ಯುಮೆಂಟ್ಸ್ ಇದೆಯೋ ಅದನ್ನು ಸದನದ ಮುಂದೆ ಇಡಲಾಗದಿದ್ದರೆ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ. ಇದನ್ನು ಕಮಿಟಿಯವರು ಸವಿವರವಾಗಿ ಪರೀಕ್ಷೆ ಮಾಡಲಿ. ಅವರು ತಮ್ಮ ಚಾರ್ಜಸ್‌ನ್ನು ಅಲ್ಲಿ ಪ್ರೂಫ್ ಮಾಡಲಿ. ಇಲ್ಲಿ ಅವರು ಕೊಡುವುದಕ್ಕೆ ಆಗುತ್ತಿಲ್ಲ. ಅವರು ಕೇಳುತ್ತಾ ಕುಳಿತಿರುವರೇ ಹೊರತು ನಾನಾಗಿದ್ದರೆ ಈ ರೀತಿ ಕುಳಿತುಕೊಳ್ಳುತ್ತಿರಲಿಲ್ಲ. ನಾನಾಗಿದ್ದರೆ. ತೆಗೆದುಕೊಳ್ಳಿ ರಾಮದೇವ್ ಇಷ್ಟು ತೆಗೆದುಕೊಂಡಿದ್ದಾರೆ, ರಘುಪತಿಯವರು ಇಷ್ಟು ತೆಗೆದುಕೊಂಡಿದ್ದಾರೆ. ಮಾನ್ಯ ತಿಮ್ಮೇಗೌಡರು ಇಷ್ಟು ತೆಗೆದುಕೊಂಡಿದ್ದಾರೆ. ನನ್ನ ಹತ್ತಿರ ಪ್ರೂಫ್ ಇದೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೆ. ಆದರೆ ಈ ರೀತಿ ಅವರು ಮಾಡದೇ ಸುಮ್ಮನೆ ಕುಳಿತುಕೊಂಡಿದ್ದಾರೆ. ಏಕೆಂದರೆ ಹೇಳುವಾಗ ಇದು ಬಹಳ ಚೆನ್ನಾಗಿ ಕಾಣಿಸಿತು. ಆದರೆ ಇವತ್ತು ಅವರ ಹತ್ತಿರ ಏನೂ ಇಲ್ಲ. ಏನಾದರೂ ಮಾಡಿ ರಕ್ಷಣೆ ಪಡೆದುಕೊಳ್ಳಬೇಕು, ಈ ಒಂದು ಕಾನೂನು ಕಟ್ಟಳೆಯಲ್ಲಿ ರಕ್ಷಣೆ ಪಡೆದುಕೊಳ್ಳಬೇಕೆಂದಿದ್ದ ಹಾಗೆ ಕಾಣುತ್ತದೆ. ದಯಮಾಡಿ ನಮ್ಮ ಗೌರವವನ್ನು ಕಾಪಾಡುವುದು ತಮ್ಮ ಕೈಯಲ್ಲಿ ಇದೆ. ನಾವು ನಿರ್ಭೀತಿಯಿಂದ ಜನರ ಕೆಲಸವನ್ನು ಮಾಡತಕ್ಕವರು ಯಾವುದೇ ಒಂದು ಪ್ರತಿಷ್ಠೆಗೂ ಧಕ್ಕೆ ಬಾರದಂತೆ ಕೆಲಸ ಮಾಡುವುದಕ್ಕೆ ತಾವು ರಕ್ಷಣೆಯನ್ನು ಕೊಡಬೇಕೆಂದು ಹೇಳಿ, ಮಾನ್ಯ ಸದಸ್ಯರು ಇನ್ನಾದರೂ ವಿವರಗಳನ್ನು ಕೊಡಲಿ ಇಲ್ಲದ ಪಕ್ಷದಲ್ಲಿ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಕೆ.ಜಿ. ಮಹೇಶ್ವರಪ್ಪನವರು ಒಂದು ಮಾತನ್ನು ಹೇಳಿದರು. ಅಧ್ಯಕ್ಷರು ಕಡತದಲ್ಲಿರುವ ಮಾತನ್ನು ತೆಗೆದುಹಾಕಿದ್ದರೆ ಹಕ್ಕುಚ್ಯುತಿ ಸೂಚನೆಯಾಗಿ ಬರುತ್ತಿರಲಿಲ್ಲ—ಎನ್ನುವ ಮಾತನ್ನು; ಆ ಅರ್ಥ ಬರುವ ಹಾಗೆ ಹೇಳಿದ್ದಾರೆ. ನಾನೇ ಮಾನ್ಯ ಸದಸ್ಯರಿಗೆ ವಿವರಣೆ ಕೊಡಬೇಕಾ ಯಿತು. ಚರ್ಚೆಯಾದ ದಿವಸ ಈ ಭಾಷೆ ಕಡತಕ್ಕೆ ಹೋಗಿತ್ತೋ ಇಲ್ಲವೋ ತರಿಸಿನೋಡಿ ಮಾರನೇ ದಿವಸ ಹೇಳುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದೇವೆ. ಆದರೆ ಆ ದಿವಸ ಬಂದಂಥ ಕಡತದಲ್ಲಿ ಇಂಥ ಆಪಾದನೆ ಮಾಡಿದ್ದಾರೆ ಅದು ಇಲ್ಲ ಎನ್ನುವ ಕಾರಣದಿಂದ ವಿವರಣೆ ಅನಗತ್ಯ ಎಂದು ಕಂಡಕೂಡಲೇ ನಿನ್ನೆ ಸಾಯಂಕಾಲ ಟೇಪಿನಲ್ಲಿ ಬಂದಿರತಕ್ಕಂಥಾದ್ದನ್ನು ಸಭೆಯ ಮುಂದಿಟ್ಟಿದ್ದೇನೆ, ತೆಗೆದು ಹಾಕಿದ್ದಾರೆ ಎನ್ನುವಂಥ ಪ್ರಶ್ನೆ ಮಾನ್ಯ ಸದಸ್ಯರಾದ ಮಹೇಶ್ವರಪ್ಪನವರು ಏನು ಹೇಳಿದ್ದಾರೆ ; ಅದು ಉದ್ಭವಿಸುವು ದಿಲ್ಲ. ಶ್ರೀಮಾನ್ ರಾಮದೇವ್ ಮತ್ತು 33 ಜನ ಸದಸ್ಯರು ಈ ದಿನ ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ಆಧರಿಸಿ ಹಕ್ಕುಚ್ಯುತಿ ಸೂಚನೆಯನ್ನು ಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರ ವನ್ನೂ ಕಡತಕ್ಕೆ ಹೋಗಿರತಕ್ಕ ವಿಚಾರವನ್ನು ಸೂಕ್ಷ್ಮವಾಗಿ ತೂಗಿ ನೋಡಿದೆ. ಕಡತದಲ್ಲಿ ಏನಿದೆ ಎನ್ನುವ ಪ್ರಸ್ತಾಪಕ್ಕಿಂತ ಹೆಚ್ಚಿಗೆ ಪತ್ರಿಕೆಯಲ್ಲಿ ಏನು ಬಂದಿದೆ ಎನ್ನುವುದರ ಬಗ್ಗೆ ಪ್ರಸ್ತಾಪವಾಗಿದೆ. ಶ್ರೀಮಾನ್ ರಾಮದೇವ್‌ರವರು ತಮ್ಮ ಹಕ್ಕುಚ್ಯುತಿ ಸೂಚನೆಯನ್ನು ಪ್ರತಿಪಾದನೆ ಮಾಡುತ್ತಾ, ಶೆಕ್ ದರ್ ಮತ್ತು ಕೌಲೆ ಪ್ರಾಕ್ಟಿಸ್ ಪ್ರೊಸೀಜರ್‌ನ ಕೆಲವು ಭಾಗಗಳನ್ನು ಉದಾಹರಣೆಯಾಗಿ ಹೇಳಿ ದ್ದಾರೆ. ಅವರು ಉದಾಹರಣೆ ಮಾಡಿರತಕ್ಕ ಭಾಗಗಳು ಶಾಸನ ಸಭೆಯ ಹೊರಗಡೆ ಮಾಡಿದಂಥ ಆಪಾದನೆಗಳನ್ನು, ಶಾಸನಸಭೆಯೊಳಗೆ ಹೇಗೆ ಹಕ್ಕುಚ್ಯುತಿಯಾಗುತ್ತವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತುತ ಇರತಕ್ಕಂಥ ಈ ಮನೆಯ ಸದಸ್ಯರು ಹಕ್ಕುಚ್ಯುತಿ ಮಾಡಿ ದ್ದಾರೆಂದು ನಿಲುವಳಿ ಸೂಚನೆ ಇರುವುದರಿಂದ ಈ ಸಂದರ್ಭದಲ್ಲಿ ಊರ್ಜಿತವಾಗುವುದಿಲ್ಲ. ಹಾಗೆ ಪ್ರತಿಪಕ್ಷದ ನಾಯಕರು ಮತ್ತು ಇನ್ನುಳಿದ ಅನೇಕ ಸದಸ್ಯರು ಕೂಡ ಈ ವಿಚಾರದಲ್ಲಿ ತಮ್ಮ ಅಭಿ ಪ್ರಾಯವನ್ನು ವ್ಯಕ್ತಮಾಡಿದ್ದಾರೆ. ನಾನು ಪುನ : ಶೆಕ್‌ದರ್, ಕೌಲೆ ಪುಸ್ತಕದಲ್ಲಿರತಕ್ಕ ಜನರಲ್ ರೂಲ್ಸಿಗೆ ಹೋಗಬೇಕಾಗುತ್ತದೆ. 781ನೇ ಪುಟದಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ.

"When allegations are made by a member against another member or a Minister and the letter denies those allegations.

> the denial should normally be accepted by the member who made the allegations unless he is sure about the correctness of the charges made and is prepared to take full responsibility for the same."

If he also takes full responsibility, what should be done? That is given in page 782.

> "Where allegations are made in the House against a particular political party, the leader of that party or group in the House is permitted to make a statement in regartd thereto "

The issue before this Honourable House to-day is whether the allegations made amount to a breach of privilege of an individual or to party as a whole. The notice of privilege motion does not definitely say that it is a breach of privilege of an individual member.

ಪತ್ರಿಕೆಯಲ್ಲಿ ಪ್ರಮುಖವಾಗಿ ಕನ್ನಡ ಪ್ರಭ ಪತ್ರಿಕೆಯಲ್ಲಿ ಜನತಾ ಶಾಸಕರು ಲೋಕೋಪಯೋಗಿ ಇಲಾಖೆ ವರ್ಗಾವರ್ಗಿ ಸಂಬಂಧದಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ. ಇಲಾಖೆಯ ನೈತಿಕ ಬಲ ತಗಿ ದೆ, ತನಿಖೆಗೆ ಏರ್ಪಾಟು ಮಾಡಿ ಸಾಬೀತು ಮಾಡುತ್ತೇನೆ ಎಂದು ಪ್ರತಿಪಾದನೆ ಮಾಡುತ್ತಾ : ಒಡೆಯ ರಾಜ್ ಅವರು ಆಪಾದಿಸಿದ್ದಾರೆ. ಇದು ಮುಂಜಾನೆ ಪತ್ರಿಕೆಯಲ್ಲೂ ಬಂದಿದೆ. ನಿರ್ದಿಷ್ಟವಾಗಿ ಇಂಥ ಸದಸ್ಯರೇ ಎನ್ನುವಂಥ ಮಾತನ್ನು ಇದರಲ್ಲೂ ಹೇಳುವುದಿಲ್ಲ. ಪೂರ್ಣವಾಗಿ ಪಕ್ಷಕ್ಕೆ ಸಿಮಿತ ವಾದಂಥಾದ್ದು ಎಂದು ಸಾರಾಸಗಟು ಆಪಾದನೆ ಮಾಡಿದ್ದಾರೆ ಎನ್ನುವಂಥದ್ದು ಬರುವುದಿಲ್ಲ. ಆಪಾದನೆಗಳು ಸಂಸದೀಯ ವ್ಯವಹಾರದಲ್ಲಿ ನಡೆದುಬಂದ ಪರಿಪಾಠ. ಆಪಾದನೆ ಮಾಡಿದರೆ ಉತ್ತರ ಕೊಡತಕ್ಕಂಥ ಅವಕಾಶ ಅವರಿಗೆ ಇದೆ. ಹೀಗೆ ಕೊಡತಕ್ಕಂಥ ಉತ್ತರ, ಚಾರ್ಜ ಜನಿಯುನ್ ಒಪ್ಪಿ ಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದಾರೆ, ಒಂದು ವೇಳೆ ಆಪಾದನೆ ಮಾಡಿದರೂ, ಸಮರ್ಥವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಮುಂದೆ ಇದೇ ಬೇಡಿಕೆ ಚರ್ಚೆಯಾಗುವುದರಿಂದ, ಉತ್ತರ ಕೊಡತಕ್ಕಂಥ ಮತ್ತಷ್ಟು ವಿಶೇಷವಾದ ಅವಕಾಶ ಸಂಬಂಧಪಟ್ಟ ಮಾನ್ಯ ಮಂತ್ರಿಯವರಿಗೆ ಇದೆ. ಆ ಸಂದರ್ಭದಲ್ಲಿ ಪಾರ್ಟಿಯವರು ಕೂಡ ಮಧ್ಯೆ ಪ್ರವೇಶಿಸಿ ವಿವರಣೆ ಕೊಡತಕ್ಕಂಥ ಅವಕಾಶ ಇದೆ. ಆದುದರಿಂದ ಈ ವಿಷಯ ಹಕ್ಕುಚ್ಯುತಿ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಳ್ಳಿಹಾಕಲಾಗಿದೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಮನವಿಗಳು

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು 334ರ ಕೆಳಗೆ ಎರಡು ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು.—ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ಎಂ. ಇ. ಎಸ್. ನೌಕರರು ಕಳೆದ 15 ದಿವಸ ಗಳಿಂದ ಮುಷ್ಕರ ಮಾಡುತ್ತಿರುವ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳಿರುವಾಗಲೇ ಪ್ರಸ್ತಾಪ ಮಾಡಿದ್ದೆ, ಈಗ ಅವರು ಸೌದಿ ಅರಬ್ಬಿಯಾಕ್ಕೆ ಹೋಗಿದ್ದಾರೆ; ನಾವು ಎಲ್ಲಿಗೆ ಹೋಗುವುದು.

ಅಧ್ಯಕ್ಷರು,—ಸರ್ಕಾರ ಹೋಗಿಲ್ಲ.

ಶ್ರೀ ಕಾಳಮರಿಗೌಡ.—ಸ್ವಾಮಿ, ನಾನು 334ರ ಕೆಳಗೆ ಒಂದು ನೋಟೀಸ್ ಕಳುಹಿಸಿದ್ದೆ.

CALLING ATTENTION TO MATTERS OF URGENT PUBLIC IMPORTANCE

Re : Hardship caused to the public due to shortage of rice and the increase in the price of rice on account of closure of three rice mills in Belgaum City.